# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026



ಹಂಪಿ ಟೈಮ್ಸ್ HAMPI TIMES Kannada Daily
BOOK SPACE
as your requirement
Special Offer Just For You!
Special Discount
And Free Creative
Support
www.hampitimes.com
epaper.hampitimes.com
CALL US : 9448633038
Email us Your Advertisement Content to : hampitimes@gmail.com



| ಸಂಪುಟ:02 | ಸಂಚಿಕೆ: 298 | ಪಿ.ಆರ್.ಜಿ.ಐ.ನಂ.:KARKAN/2023/88055 | ವಿಜಯನಗರ | 06.06.2025 | ಶುಕ್ರವಾರ | ಪುಟ:04 | ಬೆಲೆ:2 |
|---|---|---|---|---|---|---|---|
| Volume:02 | Issue: 298 | PRGI No:KARKAN/2023/88055 | VIJAYANAGARA | 06.06.2025 | Friday | Page:04 | Rs:2 |




## ಕವಿ ಮನಸು

### ಅರಿಯೋಣ ಬನ್ನಿರಿ

"ಅರಿಯೋಣ ಬನ್ನಿರಿ,
ಹಸಿರೆ ಉಸಿರು ತಿಳಿಯೋಣ ಬನ್ನಿರಿ
ಅರಿವ ಮೂಡಿಸೋಣ ಬೇಗ ಬನ್ನಿರಿ"

ತುಂಬುತ್ತಿದೆ ಈ ಧರೆಯು ನಿತ್ಯ ಪ್ಲಾಸ್ಟಿಕ್ ಕಸದಿಂದ,
ಬೀಳುತ್ತಿದೆ ತ್ಯಾಜ್ಯದ ರಾಶಿಯು ಪ್ರತಿ ಮನೆಮನೆಯಿಂದ.
ಪ್ಲಾಸ್ಟಿಕ್ ವಸ್ತುಗಳ ಬಳಕೆಯನ್ನು ಕಡಿಮೆ ಮಾಡೋಣ
ಪರಿಸರ ಸ್ನೇಹಿ ವಸ್ತುಗಳನ್ನು ಎಲ್ಲೆಡೆಯೂ ಬಳಸೋಣ.

ಪ್ಲಾಸ್ಟಿಕ್ ಚೀಲಗಳ ಬಳಕೆಯನ್ನು ಬಿಟ್ಟು ಬಿಡೋಣ,
ಸೆಣಬು ಹತ್ತಿಯ ಮರುಬಳಕೆಯ ಚೀಲವ ಹಿಡಿಯೋಣ.
ಅನಗತ್ಯ ಪ್ಲಾಸ್ಟಿಕ್ ಉತ್ಪಾದನೆಯನ್ನು ನಿಷೇಧಿಸೋಣ,
ಪರಿಸರದ ಉಳಿವಿಗಾಗಿ ನಾವು ತುಸು ಬದಲಾಗೋಣ.

ಪರ್ಯಾವರಣದ ಸುರಕ್ಷತೆಯಿಂದಲೇ ನಮ್ಮ ಉಳಿವು.
ನೆಲ ಜಲ ವಾಯು ಅಂತರಿಕ್ಷ ಎಲ್ಲಡೆ ಈಗ ಮಾಲಿನ್ಯವು.
ಪರಿಸರವನ್ನು ರಕ್ಷಿಸಬೇಕು ನಮ್ಮ ಒಳ್ಳೆಯ ನಾಳೆಗಳಿಗಾಗಿ,
ಇಲ್ಲದಿರೆ ಪರದಾಡಬೇಕು ಶುದ್ಧ ಆಹಾರ ಗಾಳಿ ನೀರಿಗಾಗಿ.

ಪರಿಸರದ ಕಾಳಜಿ ದಿನವೊಂದಕ್ಕೆ ಸೀಮಿತವಾಗದಿರಲಿ,
ಪ್ರತಿಯೊಬ್ಬರಲ್ಲೂ ನಿಸರ್ಗದ ಕುರಿತು ಪ್ರೀತಿ ಆವರಿಸಲಿ,
ಹಿತಮಿತವಾಗಿ ನೈಸರ್ಗಿಕ ಸಂಪನ್ಮೂಲವ ಬಳಸೋಣ,
ಪರಿಸರ ಸ್ನೇಹಿಯಾಗಿ ಕೊನೆಯವರೆಗೂ ಬದುಕೋಣ.

– ಮಮತಾ ಶೃಂಗೇರಿ

## ಪರಿಸರವನ್ನು ಕಾಪಾಡಿಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿ - ಪ್ರೊ.ಬಿ.ಕೆ. ರವಿ

**ಹಂಪಿ ಟೈಮ್ಸ್ ಕೊಪ್ಪಳ**

ಮಾನವನ ದುರಾಸೆಯಿಂದ ಪರಿಸರ ಹಾಳಾಗುತ್ತಿದ್ದು, ಮಾನವನಿಂದಲೇ ಸರಿಯಾಗಬೇಕಿದೆ ನಾವು ಬದುಕುವ ಪರಿಸರವನ್ನು ಕಾಪಾಡಿಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿ ಎಂದು ಕೊಪ್ಪಳ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಬಿ.ಕೆ. ರವಿ ತಿಳಿಸಿದರು.

ಕೊಪ್ಪಳ ವಿಶ್ವವಿದ್ಯಾಲಯದಲ್ಲಿ ಗುರುವಾರ ನಡೆದ ವಿಶ್ವ ಪರಿಸರ ದಿನಾಚರಣೆಯಲ್ಲಿ ಮಾತನಾಡಿದರು. ಪ್ಲಾಸ್ಟಿಕ್ ಮಾಲಿನ್ಯವನ್ನು ಕೊನೆಗೊಳಿಸುವುದು ವಿಶ್ವ ಪರಿಸರ ದಿನದ ಥೀಮ್ ಆಗಿದೆ. ಪ್ಲಾಸ್ಟಿಕ್ ತ್ಯಾಜ್ಯದಿಂದ ಪರಿಸರ ಮತ್ತು ಆರೋಗ್ಯದ ಮೇಲೆ ಹೆಚ್ಚು ದುಷ್ಪರಿಣಾಮ, ಪ್ಲಾಸ್ಟಿಕ್ ಬಳಕೆಯನ್ನು ನಿಯಂತ್ರಿಸುವುದು ಪರಿಸರ ರಕ್ಷಣೆಗೆ ಮೊದಲ ಹೆಜ್ಜೆ. ಬಳಕೆಯನ್ನು ಕಡಿಮೆ ಮಾಡುವ ಶಪಥ ಮಾಡುವ ಮೂಲಕ ಈ ದಿನವನ್ನು ಆಚರಣೆ ಮಾಡೋಣ, ಪ್ಲಾಸ್ಟಿಕ್ ಬಳಕೆಯನ್ನು ತಗ್ಗಿಸಿದರೆ ಭವಿಷ್ಯದ ಪೀಳಿಗೆಗೆ ಪರಿಸರ ಉಳಿಯುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಕೊಪ್ಪಳ ವಿಶ್ವವಿದ್ಯಾಲಯದ ಕುಲಸಚಿವರಾದ ಪ್ರೊ. ಕೆ.ವಿ.ಪ್ರಸಾದ್, ಯಲಬುರ್ಗಾ ಸ್ನಾತಕೋತ್ತರ ಕೇಂದ್ರದ ಆಡಳಿತಾಧಿಕಾರಿ ಕೆ.ಎಚ್.ಛತ್ರದ, ಕೊಪ್ಪಳ ವಿಶ್ವವಿದ್ಯಾಲಯದ ಆಡಳಿತಾಧಿಕಾರಿ ತಿಮ್ಮಾರೆಡ್ಡಿ ಮೇಟಿ ಹಾಗೂ ಸಿಂಡಿಕೇಟ್ ಸದಸ್ಯರು, ಬೋಧಕ ಬೋಧಕೇತರ ಸಿಬ್ಬಂದಿಗಳು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ.
ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ಕನ್ನಡಕ್ಕಾಗಿ ಮೋಜನ್ ಕೆಲಸ ಮಾಡಿದ ಮಾಸ್ತಿ

**“ಹರಿದುತುಂಡಾಗಿಹುದುಇಂದು ಕನ್ನಡ ನಾಡು;
ಅಣ್ಣತಮ್ಮದಿರುತಾವಣ್ಣತಮ್ಮದಿರೆಂದು
ತಿಳಿಯಲಾರರು, ನಡೆಯಲಾರರು;ಬಾ ಬಂಧು
ಎಂದುಕರೆಯಲು, ‘ಸ್ವಾಮಿ, ನನ್ನೂರುಧಾರ್ವಾಡ.
ನನ್ನೂರು ಮೈಸೂರು, ನನ್ನೂರುಎರಕಾಡು,
ಮರ್ಯಾದೆಯಿಂದಕರೆಯಿರಿಎನ್ನ’ಎನ್ನುವರು ..”**






1933ರಲ್ಲಿಯೇ ಕನ್ನಡ ನಾಡಿನ ಸ್ಥಿತಿಯನ್ನು ನೆನೆದುಮರುಗಿಕರ್ನಾಟಕಏಕೀಕರಣದ ಕುರಿತೂ ಕಾರ್ಯಪ್ರವೃತ್ತರಾದ ಡಾ.ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ‘ಭಾರತೀಯ ಜ್ಞಾನಪೀಠ ಪ್ರಶಸ್ತಿ’ಯಗೌರವಕ್ಕೆ ಭಾಜನರಾದ ಕನ್ನಡದ ಹಿರಿಯ ಸಾಹಿತಿಗಳಲ್ಲಿ ನಾಲ್ಕನೆಯವರು.‘ಶ್ರೀನಿವಾಸ’ ಕಾವ್ಯನಾಮದಿಂದ ಕನ್ನಡ ಸಾರಸ್ವತ ಲೋಕದಲ್ಲಿ ಚಿರಪರಿಚಿತರಾದ ಮಾಸ್ತಿಯವರು ಕನ್ನಡ ನಾಡು-ನುಡಿಗೆ ಅತ್ಯಮೂಲ್ಯವಾದ ಕೊಡುಗೆಯನ್ನು ನೀಡಿದ್ದಾರೆ. ‘ಮಾಸ್ತಿ ಕನ್ನಡದ ಆಸ್ತಿ’ ಎಂದೇ ಖ್ಯಾತರಾಗಿರುವ ಶ್ರೀನಿವಾಸರು ಭಾರತೀಯ ಸಾಹಿತಿಗಳ ಅಗ್ರಪಂಕ್ತಿಯಲ್ಲಿ ಹಿರಿಯಚೇತನ, ಕನ್ನಡದ ಅಸಾಮಾನ್ಯ ಲೇಖಕ .ಕನ್ನಡ ಸಾಹಿತ್ಯ ಲೋಕಕ್ಕೆ ‘ನುಡಿ ಸಹೋದರರು’ ಎಂಬ ಪರಿಕಲ್ಪನೆಯನ್ನು ಪರಿಚಯಿಸಿದರು. ಹೀಗಾಗಿ ಅವರನ್ನು ಬಹುತೇಕ ಲೇಖಕರು ‘ಅಣ್ಣ’ ಎಂದೇಕರೆಯುತ್ತಿದ್ದರು. ನವೋದಯ, ಪ್ರಗತಿಶೀಲ, ನವ್ಯ, ದಲಿತ ಬಂಡಾಯದವರೂ ಅವರನ್ನು ಪ್ರೀತಿಸಿದ್ದರು. ಬೇಂದ್ರೆಯವರೂ ‘ಅಣ್ಣ’ ಎಂದೇ ಕರೆಯುತ್ತಿದ್ದರು.

ಇಂದು ಮಾಸ್ತಿಯವರ 129ನೆಯ ಜನ್ಮದಿನ. ಮತ್ತೆ ಮತ್ತೆ ಮಾಸ್ತಿಯವರನ್ನು, ಏಕೆ ಓದಬೇಕು?ಏಕೆ ನೆನಪಿಸಿಕೊಳ್ಳಬೇಕು?ಎಂಬ ಪ್ರಶ್ನೆ ಎದುರಾಗುವುದು ಸಹಜ. ಇಂದಿನ ಹೊಸತಲೆಮಾರುತಮ್ಮ ವರ್ತಮಾನ ಮತ್ತು ಭವಿಷ್ಯವನ್ನು ಮೌಲ್ಯಪೂರಿತ ಹಾಗೂ ಉಜ್ವಲವಾಗಿಸಿಕೊಳ್ಳಬೇಕಾದರೆ ನಮ್ಮ ಪರಂಪರೆಯ ಅರಿವನ್ನು ಹೊಂದುವುದು ಅವಶ್ಯ. ಮಾಸ್ತಿಯವರು ಕನ್ನಡದ ಸಾಂಸ್ಕೃತಿಕಅನನ್ಯತೆ, ಸಮಕಾಲೀನ ಸಾಮಾಜಿಕ ಸಂದರ್ಭಗಳನ್ನು ಚಾರಿತ್ರಿಕ ವಿಸ್ಮೃತಿಗಳನ್ನು ಸಂಯಮದ ಧಾಟಿಯಲ್ಲಿ ಅತ್ಯಂತ ಆಪ್ತವಾಗಿ ತಮ್ಮ ಬರೆಹಗಳ ಮೂಲಕ ಕಟ್ಟಿಕೊಟ್ಟಿದ್ದಾರೆ. ಹೀಗಾಗಿ ಶ್ರೇಷ್ಠತೆಯ ಹಂಬಲ ವಿರುವವರು ಅವಶ್ಯವಾಗಿ ಓದಲೇಬೇಕಾಗಿದೆ.

ಶ್ರೀನಿವಾಸರು ಬೆಂಗಳೂರಿನ ಸಮೀಪದ ಕೋಲಾರ ಜಿಲ್ಲೆಯ ಮಾಲೂರು ತಾಲೂಕಿನ ಮಾಸ್ತಿಗ್ರಾಮದಲ್ಲಿ 6 ಜೂನ್ 1891ರಂದು ಜನಿಸಿದರು. (ನಿಧನ: 6ಜೂನ್1986). ‘ಪೆರಿಯಾತ್’ (ದೊಡ್ಡ ಮನೆತನ)ಕ್ಕೆ ಸೇರಿದ ಮಾಸ್ತಿಯವರ ತಂದೆ ರಾಮಸ್ವಾಮಿ ಅಯ್ಯಂಗಾರ್, ತಾಯಿ ತಿರುಮಲಮ್ಮ, ಮನೆತನದ ವೃತ್ತಿ ಶಾನುಭೋಗಿಕೆ. ಶ್ರೀಮಂತವಾಗಿ ಬಾಳಿದ ಕುಟುಂಬ. ಆದರೆ ಮಾಸ್ತಿಯವರು ಹುಟ್ಟಿದ ಸಂದರ್ಭದಲ್ಲಿ ತುಂಬ ಬಡತನಕ್ಕೆ ಒಳಗಾಯಿತು. ಯಲದೂರು, ಮಾಸ್ತಿ, ಶಿವಾರ ಪಟ್ಟಣಗಳಲ್ಲಿ ಮಾಸ್ತಿಯವರು ಬಾಲ್ಯದ ವಿದ್ಯಾಭ್ಯಾಸ ಮಾಡಿದರು. ಬಾಲ್ಯದಲ್ಲಿ ಶಿವಾರಪಟ್ಟಣದ ಶಾಲೆಯ ನಾರಣಪ್ಪ ಎಂಬ ಉಪಾಧ್ಯಾಯರ ಗಾಢವಾದ ಪ್ರಭಾವಕ್ಕೊಳಗಾದರು. ನಂತರ ಮೈಸೂರಿನಲ್ಲಿ ವೆಸ್ಲಿಯನ್ ಹೈಸ್ಕೂಲು, ಮಹಾರಾಜ ಕಾಲೇಜಿನಲ್ಲಿ ಎಫ್.ಎ., ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಇಂಗ್ಲಿಷ್, ಕನ್ನಡ, ಭೌತಶಾಸ್ತ್ರ ವಿಷಯಗಳನ್ನು ತೆಗೆದುಕೊಂಡು ಬಿ.ಎ. ಪರೀಕ್ಷೆಯನ್ನು ಉನ್ನತ ದರ್ಜೆಯಲ್ಲಿ ಪಾಸು ಮಾಡಿದರು. ಪೊಲೀಸ್ ಸೂಪರಿಂಟೆಂಡೆಂಟರಾಗಿದ್ದ ಕೃಷ್ಣಸ್ವಾಮಿ ಅಯ್ಯಂಗಾರ್ ಅವರ ಮಗಳು ಪಂಕಜಮ್ಮ ಅವರನ್ನು ವಿವಾಹವಾದರು. 1913ರಲ್ಲಿ ಅಸಿಸ್ಟೆಂಟ್ ಕಮಿಷನರ್ ಆಗಿ ನೇಮಕ ಗೊಂಡು, ಕೆಲಸದಲ್ಲಿದ್ದಾಗಲೇ ಪರೀಕ್ಷೆಗೆ ಕುಳಿತು ಎಂ.ಎ. ಪದವಿಯನ್ನೂ ಗಳಿಸಿದರು. ಕೆಲಕಾಲ ಬೆಂಗಳೂರು, ಮದರಾಸುಗಳಲ್ಲಿಉಪನ್ಯಾಸಕರಾಗಿಯೂ,ತರುವಾಯ ಅಸಿಸ್ಟೆಂಟ್ ಕಮಿಷನರ್, ಮೊದಲಾದ ಹಲವಾರುಉನ್ನತ ಹುದ್ದೆಗಳನ್ನು ಸಮರ್ಥವಾಗಿ ನಿರ್ವಹಿಸಿ ಜನಜನಿತರಾದರು.ಉನ್ನತ ಹುದ್ದೆಗೇರಿದಾಗಲೂ ಜನಸಾಮಾನ್ಯರ ಕಷ್ಟಸುಖದಲ್ಲಿ ಪಾಲ್ಗೊಳ್ಳುತ್ತಿದ್ದುದು ಅವರ ಸಾಹಿತ್ಯ ರಚನೆಗೆ ಅಪಾರ ಅನುಭವ ದ್ರವ್ಯವಾಗಿ ಪರಿಣಮಿಸಿತು.



ಡಾ.ಬಿ.ಜಿ.ಕನಕೇಶಮೂರ್ತಿ
ಬೆಂಗಳೂರು

Scan For Digital Colourful
HAMPI TIMES E-paper

ಪ್ರೊ. ಜಿ. ವೆಂಕಟಸುಬ್ಬಯ್ಯನವರು ಮಾಸ್ತಿಯವರನ್ನು ಕುರಿತು ”ಮಾಸ್ತಿಯವರ ಮಾತು ತಿಳಿನೀರಿನ ಹಾಗೆ ಶುಭ್ರ; ಅಮೃತವರ್ಷದಂತೆ ಆನಂದಕರ. ಅವರ ಬರಹ ಸಮುದ್ರದಂತೆ ಆಳ; ಅಲ್ಲಿನ ಜಲಚರಗಳಂತೆ ವೈವಿಧ್ಯಮಯ, ವಿಸ್ಮಯಜನಕ. ಅವರ ಬದುಕು ಆಳವಾದ ನದಿಯ ಪ್ರವಾಹದಂತೆಗಂಭೀರ, ಅಷ್ಟೇ ಶಾಂತಪೂರ್ಣ. ವ್ಯಕ್ತಿ ಮಾಗುವುದು, ಪಕ್ವತೆಅನ್ನುವುದನ್ನು ತಿಳಿಯ ಬೇಕಾದರೆ ಮಾಸ್ತಿಯವರನ್ನು ಕಾಣಬೇಕು” ಎಂಬ ಅರ್ಥಪೂರ್ಣ ವಾಗಿ ಬಣ್ಣಿಸಿದ್ದಾರೆ.

ಹದಿನೈದು ಕಥಾ ಸಂಗ್ರಹಗಳನ್ನು; ಸುಬ್ಬಣ್ಣ, ಚನ್ನಬಸವನಾಯಕ, ಚಿಕವೀರರಾಜೇಂದ್ರ, ಶೇಷಮ್ಮ-ಕಾದಂಬರಿಗಳನ್ನು; ಸಾವಿತ್ರಿ, ಯಶೋಧರಾ, ಕಾಕನಕೋಟೆ, ಶಾಂತಾ, ಮೊದಲಾದ ಹದಿನಾರು ನಾಟಕ, ಗೀತನಾಟಕಗಳನ್ನು; ಬಿನ್ನಹ, ಅರುಣ, ತಾವರೆ, ಚೆಲುವು, ನವರಾತ್ರಿ(ಕಥನಕವನ), ಶ್ರೀರಾಮ ಪಟ್ಟಾಭಿಷೇಕ(ಖಂಡಕಾವ್ಯ) ಮೊದಲಾದ ಕಾವ್ಯಸಂಗ್ರಹಗಳನ್ನು; ಆದಿಕವಿ ವಾಲ್ಮೀಕಿ, ಭಾರತತೀರ್ಥ ಕಾವ್ಯವಿಮರ್ಶೆಗಳನ್ನು;ರವೀಂದ್ರನಾಥಠಾಕೂರ್, ಶ್ರೀರಾಮಕೃಷ್ಣ-ಜೀವನ ಚರಿತ್ರೆಗಳನ್ನು; ‘ಚಿತ್ರಾಂಗದ’, ‘ಹ್ಯಾಮ್ಲೆಟ್’, ಚಂಡಮಾರುತ’ಅನುವಾದಿತ ನಾಟಕಗಳನ್ನು; ‘ಜನಪದ ಸಾಹಿತ್ಯ’, ‘ಪ್ರಸಂಗ’, ‘ನಮ್ಮ ನುಡಿ’ ಮೊದಲಾದ ಲೇಖನ, ಪ್ರಬಂಧಗಳನ್ನು; Popular Culture in Karnataka, The poetry of Valmiki, Kalidasa ಮೊದಲಾದಇಂಗ್ಲಿಷ್ ಕೃತಿಗಳನ್ನು- ರಚಿಸಿದ್ದಾರೆ. ಸುಮಾರುಇಪ್ಪತ್ತೈದು ವರ್ಷಗಳ ಕಾಲ ‘ಜೀವನ’ ಪತ್ರಿಕೆಯ ಸಂಪಾದಕರಾಗಿದ್ದರು. ‘ಭಾವ’ ಎಂಬ ಕೃತಿಯ ಮೂರು ಸಂಪುಟಗಳಲ್ಲಿ ತಮ್ಮ ಬದುಕಿನಯಾತ್ರೆಯ ವಿವರಗಳನ್ನು ಚಿತ್ರಿಸಿದ್ದಾರೆ.

‘ಸಣ್ಣ ಕಥೆಗಳ ಜನಕ’ರೆಂದೇ ಚಿರಪರಿಚಿತರಾದ ಮಾಸ್ತಿಯವರು ಒಂದು ನೂರು ಕಥೆಗಳನ್ನು ಬರೆದಿದ್ದಾರೆ. ‘ಕೆಲವು ಸಣ್ಣ ಕಥೆಗಳು’(1920)ಮೊದಲ ಕಥಾಸಂಗ್ರಹ ಹಾಗೂ ಆಧುನಿಕ ಕನ್ನಡ ಸಾಹಿತ್ಯದ ಮೊದಲನೆಯ ಪುಸ್ತಕವೂ ಹೌದು. ‘ರಂಗನ ಮದುವೆ’ (1911) ಮೊದಲ ಕತೆ. ಮಾಸ್ತಿಯವರಿಗಿಂತ ಮೊದಲೇಸಣ್ಣಕತೆಗಳನ್ನು ಬರೆದಿದ್ದರೂ, ಮಾಸ್ತಿಯವರು ಅದನ್ನು ಒಂದು ವಿಶಿಷ್ಟ ಅಭಿವ್ಯಕ್ತಿಮಾಧ್ಯಮ ವನ್ನಾಗಿಸಿಕೊಂಡು ಅದಕ್ಕೆ ಒಂದು ಸ್ವರೂಪವನ್ನು ತಂದುಕೊಟ್ಟು, ಅದನ್ನು ಗಂಭೀರವಾದ ಜೀವನ ಚಿಂತನೆಯ ಮಾಧ್ಯಮವನ್ನಾಗಿಸಿ, ಭಾಷೆಯನ್ನು ಹದಗೊಳಿಸಿ ತಮ್ಮದೇ ಛಾಪನ್ನು ನೀಡಿದರು.ಲೋಕಾನುಭವನ್ನುನವಿರಾಗಿಕಥಾನುಭವವನ್ನಾಗಿಸುವಲ್ಲಿ ಮಾಸ್ತಿಯವರದು ಪಳಗಿದ ಕೈ. ರಂಗನ ಮದುವೆ, ರಂಗಸ್ವಾಮಿಯ ಅವಿವೇಕ, ಮೊಸರಿನರಂಗಮ್ಮ, ಕಲ್ಮಾಡಿಯಕೋಣ, ವೆಂಕಟಶಾಮಿಯ ಪ್ರಣಯ, ನಿಜಗಲ್ಲಿನರಾಣಿ ಮೊದಲಾದ ಕಥೆಗಳು ಜನಪ್ರಿಯವಾಗಿವೆ. ವಿದೇಶೀಯ ಸಾಹಿತ್ಯಗಳಲ್ಲಿ ತಮ್ಮನ್ನು ತೀವ್ರವಾಗಿ ಸೆಳೆದವುಗಳನ್ನು ಕನ್ನಡಜನತೆಗೆ ಪರಿಚಯಿಸಬೇಕೆಂಬ ಹಂಬಲವೂ-ಇಲ್ಲಿನ ಕಥೆಗಳಲ್ಲಿ ನಿಚ್ಚಳವಾಗಿವೆ.

ಬಿನ್ನಹ, ಅರುಣದಿಂದ ‘ಶ್ರೀರಾಮ ಪಟ್ಟಾಭಿಷೇಕ’ ದವರೆಗಿನ ಬಹುಪಾಲು ಕವಿತೆಗಳು ದಾಸಸಾಹಿತ್ಯ ಪರಂಪರೆಯ ಮುಂದುವರಿಕೆಗಳಾಗಿವೆ. ಅವುಗಳಲ್ಲಿ ಸಂಯಮ ಮತ್ತು ಮಾಗಿದ ಮನಃಸ್ಥಿತಿಯನ್ನು ಕಾಣಬಹುದು. ಸುನೀತಗಳ ಸಂಗ್ರಹ‘ಮಲಾರ’ಕುತೂಹಲಕಾರಿಯಾದುದು. ಕಥನಕವನಗಳಲ್ಲಿ ಭಾಷೆಯ ಸಮರ್ಪಕ ಬಳಕೆಗೆ ‘ರಾಮನವಮಿ’ ‘ನವರಾತ್ರಿ’-ಉತ್ತಮ ನಿದರ್ಶನಗಳು. ‘ಶ್ರೀರಾಮ ಪಟ್ಟಾಭಿಷೇಕ’ ಸುಮಾರು ಹತ್ತು ಸಾವಿರ ಪಂಕ್ತಿಗಳಿಂದ ಕೂಡಿದ ದೀರ್ಘಕಾವ್ಯ.“ಆಧುನಿಕಕನ್ನಡಕಾವ್ಯಜಗತ್ತಿನಲ್ಲಿ ಒಂದು ಮಹತ್ವದ ಕೃತಿ ಎನ್ನುವುದರಲ್ಲಿ ಸಂಶಯವಿಲ್ಲ. ಒಂದುಯುಗದ ಸಂಸ್ಕೃತಿಯಕಲ್ಪನೆ ಇಲ್ಲಿ ಹರಳುಗಟ್ಟಿದೆ,” ಎಂದು ಡಾ. ಎಲ್.ಎಸ್. ಶೇಷಗಿರಿರಾವ್ ಅಭಿಪ್ರಾಯ ಪಟ್ಟಿದ್ದಾರೆ.

ಸುಬ್ಬಣ್ಣ, ಶೇಷಮ್ಮ ಕಾದಂಬರಿಗಳು ಒಂದು ಬಗೆಯವಾದರೆ, ‘ಚೆನ್ನಬಸವನಾಯಕ’, ‘ಚಿಕ್ಕವೀರರಾಜೇಂದ್ರ’ಇನ್ನೊಂದು ಬಗೆಯವು. ‘ಸುಬ್ಬಣ್ಣ’ ಮಾಸ್ತಿಯವರ ಪ್ರತಿಭಾ ಮೂಸೆಯಿಂದ ಮೂಡಿಬಂದ ಕನ್ನಡದ ಮಹತ್ವದ ಕೃತಿಯಾಗಿದ್ದು ಸಂಗೀತಗಾರನ ಬದುಕಿನ ನೋವು-ನಲಿವಿನ ಚಿತ್ರಣವನ್ನು ಅಪೂರ್ವವಾಗಿ ಕಂಡರಿಸಿದೆ.ಇದು ಜರ್ಮನ್, ಇಂಗ್ಲಿಶ್, ತೆಲುಗು, ತಮಿಳು, ಮಲೆಯಾಳಿ, ಮರಾಠಿ ಭಾಷೆಗಳಿಗೂ ಅನುವಾದಗೊಂಡು ಜಾಗತಿಕ ಮಟ್ಟದಲ್ಲಿ ಶ್ರೇಷ್ಠ ಕಥೆಯೆನಿಸಿದೆ. ‘ಚೆನ್ನಬಸವನಾಯಕ’ ಹದಿನೆಂಟನೆಯ ಶತಮಾನದ ಬಿದನೂರು ಸಂಸ್ಥಾನದ ಏಳು-ಬೀಳುಗಳನ್ನು, ಸಂಯಮವಿಲ್ಲದ ಬಾಳು ದುರಂತಕ್ಕೆ ನಾಂದಿಯಾಗುವ ಚಿತ್ರಣವನ್ನೊಳಗೊಂಡಿದ್ದು, ‘ಚಿಕವೀರರಾಜೇಂದ್ರ’ ಹತ್ತೊಂಬತ್ತನೆಯ ಶತಮಾನದಲ್ಲಿ ಕೊಡಗು ಸಂಸ್ಥಾನ, ಆಂಗ್ಲರ ಕೈವಶದಲ್ಲಿ ಅವನತಿ ಹೊಂದಿದ ಕಥೆಯನ್ನು ಅತ್ಯಂತ ಪರಿಣಾಮಕಾರಿಯಾಗಿ ಚಿತ್ರಿಸುತ್ತದೆ. ಶೇಷಮ್ಮ ಒಂದು ಸಾಮಾಜಿಕ ಕಾದಂಬರಿ. ಪೌರಾಣಿಕ, ಐತಿಹಾಸಿಕ, ಸಾಮಾಜಿಕ ವಸ್ತುಗಳನ್ನಾಧರಿಸಿದ ಹದಿನೆಂಟು ನಾಟಕಗಳಲ್ಲಿ ‘ಯಶೋಧರ’ ಗೀತನಾಟಕ. ‘ಕಾಕನಕೋಟೆ’ ಮಾಸ್ತಿಯವರ ನಾಟಕ ಸಾಹಿತ್ಯ ಪ್ರತಿಭೆಯ ಶೃಂಗ. ಮನುಕುಲವನ್ನು ಕೇಂದ್ರವಾಗುಳ್ಳ ಈ ನಾಟಕ ಒಂದು ಜನಾಂಗದ ಸಂಸ್ಕೃತಿ, ಮನೋಧರ್ಮ, ಜೀವನ ಧಾಟಿಗಳನ್ನು, ಸಾಂಸ್ಕೃತಿಕ, ಸಾಮಾಜಿಕ ಸಂಘರ್ಷದ ಪರಿಯನ್ನು ಮನೋಜ್ಞವಾಗಿ ಚಿತ್ರಿಸುತ್ತದೆ.

ಕನ್ನಡದಲ್ಲಿ ಸಾಹಿತ್ಯ ವಿಮರ್ಶೆಯನ್ನುಕುರಿತು ಬರೆದಮೊದಲಿಗರು ಮಾಸ್ತಿಯವರು.ವಿಶ್ಲೇಷಣೆಗಿಂತಕೃತಿಯನ್ನುಸಹೃದಯಶೀಲತೆಯಿಂದ ಆಸ್ವಾದಿಸಿ, ಆತ್ಮೀಯತೆಯಿಂದ ಪರಿಚಯ ಮಾಡಿಕೊಡ ಬೇಕೆಂಬುದು ಅವರ ನಿಲುವಾಗಿತ್ತು. ಹಾಗಾಗಿ ಅವರ ವಿಮರ್ಶೆಯನ್ನು ‘ರಸನಿಷ್ಠ ವಿಮರ್ಶೆ’ ಎನ್ನಲಾಗಿದೆ. ಯುವಪ್ರತಿಭೆಗಳನ್ನು ಮೆಚ್ಚಿ ಪ್ರೋತ್ಸಾಹಿಸುವುದು ಆ ಕಾಲದಅಗತ್ಯವೂಆಗಿದ್ದರಿಂದ ಈ ಬಗೆಯ ವಿಮರ್ಶೆ ಬಂದಿದೆಎನ್ನಬಹುದು. ಮಾಸ್ತಿಯವರು ತಮ್ಮಕಥೆ, ನಾಟಕ, ಕಾದಂಬರಿಗಳನ್ನು ಇಂಗ್ಲಿಷಿಗೆ ಅನುವಾದ ಮಾಡಿದ್ದಾರೆ. ಇಂಗ್ಲಿಷ್ ನಿಂದ ಲಿಯರ್ ಮಹಾರಾಜ, ಚಂಡಮಾರುತ, ದ್ವಾದಶರಾತ್ರಿ, ಹ್ಯಾಮ್ಲೆಟ್-ಇವುಗಳನ್ನು ಕನ್ನಡಕ್ಕೆ ತಂದಿದ್ದಾರೆ.ಟಾಗೂರರ ಬಂಗಾಳಿಯ ‘ಚಿತ್ರಾಂಗದ’ ಮತ್ತೊಂದು ಅನುವಾದಿತ ನಾಟಕ.

ಕರ್ನಾಟಕದಏಕೀಕರಣಕ್ಕೆ, ನಾಡು-ನುಡಿಗೆ ಅವರು ಸಲ್ಲಿಸಿರುವ ಸೇವೆ ಅನುಪಮವಾದುದು. ಕನ್ನಡ ಬಳಸಲು ಸಂಕೋಚಪಡುತ್ತಿದ್ದ ಸಂದರ್ಭದಲ್ಲಿ ಕನ್ನಡದಲ್ಲಿ ಮಾತನಾಡಿದರು, ಕನ್ನಡದಲ್ಲಿ ಬರೆದರು. ಕನ್ನಡ ನಾಡಿನಲ್ಲಿ ಕನ್ನಡವೆ ಆಡಳಿತ ಭಾಷೆಯಾಗಬೇಕೆಂದು ದಿಟ್ಟವಾಗಿ ಪ್ರತಿಪಾದಿಸಿದರು. ಅವರು ಕನ್ನಡಕ್ಕಾಗಿ ಮಾಡಿದ ಕೆಲಸ ಅವರೇ ಹೇಳುವಂತೆ ಮುಸಲ್ಮಾನರಲ್ಲಿನ ‘ಮೋಜನ್’ನ ಕೆಲಸದಂತೆ. ‘ನಮ್ಮ ನುಡಿ’ ಭಾಷಾವಿಜ್ಞಾನಕ್ಕೆ ಸಂಬಂಧಿಸಿದ ಸ್ವತಂತ್ರಕೃತಿ. ‘ಜೀವನ’ ಪತ್ರಿಕೆಯ ಸಂಪಾದಕೀಯದಲ್ಲಿ ಮಾಸ್ತಿಯವರ ಸ್ಪಷ್ಟವಾದ ಸುಸಂಸ್ಕೃತವಾದ ನಿಲುವು, ವಿಚಾರಗಳನ್ನು ಕಾಣಬಹುದು. ಕನ್ನಡ ಸಾಹಿತ್ಯದ ಸಮೃದ್ಧತೆಗೆ ಮಾಸ್ತಿಯವರ ಕೊಡುಗೆ ಅಪಾರವಾದುದು.

ಬೆಳಗಾವಿಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ(1929), ಮೈಸೂರು ಮಹಾರಾಜರಿಂದ ‘ರಾಜಸೇವಾಸಕ್ತ’ ಎಂಬ ಬಿರುದು (1942), ಹೈದರಾಬಾದಿನಲ್ಲಿ ಅಖಿಲ ಭಾರತ ಪ್ರಾಚ್ಯ ಸಮ್ಮೇಳನದ ಹನ್ನೊಂದನೆಯ ಅಧಿವೇಶನದ ಕನ್ನಡ ವಿಭಾಗದ, ದಕ್ಷಿಣ ಭಾರತ ಭಾಷೆಗಳ ಸಮ್ಮೇಳನ, ಪುಣೆಯಲ್ಲಿ ಭಾಷಾ ಸಮ್ಮೇಳನದಲ್ಲಿ ರಾಷ್ಟ್ರಭಾಷಾ ವಿಭಾಗದ ಅಧ್ಯಕ್ಷತೆಯ ಗೌರವ, ಕರ್ನಾಟಕ ವಿಶ್ವವಿದ್ಯಾಲಯ ಮತ್ತು ಮೈಸೂರು ವಿಶ್ವವಿದ್ಯಾನಿಲಯಗಳ ಗೌರವ ಡಿ.ಲಿಟ್ ಪದವಿ, ‘ಸಣ್ಣ ಕಥೆಗಳು 12-13’ ಸಂಗ್ರಹಕ್ಕೆ ಕೇಂದ್ರಸಾಹಿತ್ಯ ಅಕಾಡೆಮಿ ಬಹುಮಾನ (1968), ಮೈಸೂರು ಸಾರ್ವಜನಿಕರಿಂದ ಸನ್ಮಾನ, ಶಿವಮೊಗ್ಗದ ಕರ್ನಾಟಕ ಸಂಘದ ಸನ್ಮಾನ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ (1972), ‘ಶ್ರೀನಿವಾಸ’ ಅಭಿನಂದನಗ್ರಂಥ ಸಮರ್ಪಣೆ, ಕೇಂದ್ರ ಸಾಹಿತ್ಯಅಕಾಡೆಮಿಯ ಫೆಲೋಷಿಪ್, ಕರ್ನಾಟಕ ಸಾಹಿತ್ಯಅಕಾಡೆಮಿ, ‘ಕಾಳಿದಾಸ’ ಪುಸ್ತಕಕ್ಕೆ ವರ್ಧಮಾನ ಪ್ರಶಸ್ತಿಗಳು (1983) ಒಂದೇ ಎರಡೇ! ಇವೆಲ್ಲದರ ಮುಕುಟಪ್ರಾಯದಂತೆ. 1984ರಲ್ಲಿ‘ಚಿಕವೀರರಾಜೇಂದ್ರ’ ಕೃತಿ ಅತ್ಯುನ್ನತ ‘ಭಾರತೀಯಜ್ಞಾನಪೀಠ ಪ್ರಶಸ್ತಿ’ಗೆ ಭಾಜನವಾಯಿತು. ”ಧಾರ್ಮಿಕ ಮೌಲ್ಯಗಳ ಬೆಳಕಿನಲ್ಲಿ ಬದುಕಿನ ಶ್ರೇಯಸ್ಸನ್ನು ಕಂಡುಕೊಳ್ಳಬೇಕೆನ್ನುವ ಚೇತನವನ್ನು ಅವರ ಸಾಹಿತ್ಯ ಕೃಷಿಯ ಹಿಂದೆ ಕಾಣಬಹುದು. ”ಅವರ ಒಲವು ಯಾವಾಗಲೂ ಒಳಿತಿನ ಕಡೆಗೆ. ಎಲ್ಲರೂ ಚೆನ್ನಾಗಿ ನೂರ್ಕಾಲ ಬಾಳಬೇಕೆಂಬುದೇ ಅವರ ಸದಾಕಾಲದ ಹಾರೈಕೆಯಾಗಿತ್ತು.

# ಪ್ಲಾಸ್ಟಿಕ್ ಮಾಲಿನ್ಯ ತಡೆಗಟ್ಟಿ ಈ ಬಾರಿಯ ಪರಿಸರ ದಿನದ ಘೋಷವಾಕ್ಯ



# ಬೀಟ್ ಪ್ಲಾಸ್ಟಿಕ್ ಪೊಲ್ಯುಷನ್

ಪರಿಸರ ಎಂದರೆ ನಮ್ಮ ಸುತ್ತಮುತ್ತಲಿನ ವಾತಾವರಣ.ಪ್ರಕೃತಿ ಎಂದರೆ ಹಸಿರು.ನಮಗೆ ದೈವದತ್ತವಾಗಿಯೇ ಪ್ರಕೃತಿ ಮಾತೆ ಸಂವೃದ್ದಿಯಾಗಿ ದೊರೆತ್ತಿದ್ದಾಳೆ. ಅದನ್ನು ನಾಶಮಾಡದೆ ಉಳಿಸಿ ಬೆಳೆಸಿಕೊಂಡು ಹೋಗುವುದು ನಮ್ಮೆಲ್ಲರ ಆದ್ಯ ಕರ್ತವ್ಯ.

ಇತ್ತೀಚಿನ ದಿನಗಳಲ್ಲಿ ಮನುಷ್ಯನ ದುರಾಸೆಯಿಂದಾಗಿ ಪರಿಸರ ಮಾಲಿನ್ಯ ಮಿತಿಮೀರಿ ಹೋಗುತ್ತಿದೆ. ಕಾಡುಗಳನ್ನು ಕಡಿದು ನಗರೀಕರಣ ಮಾಡುತ್ತಿದ್ದಾರೆ.ಪರಿಸರ ಮಾಲಿನ್ಯದಿಂದಾಗಿ ಭೂಮಿ ತಾಯಿ ತತ್ತರಿಸಿ ಹೋಗಿದ್ದಾಳೆ. ವರ್ಷದಿಂದ ವರ್ಷಕ್ಕೆ ತಾಪಮಾನ,ಜಲಮಾಲಿನ್ಯ,ಆಹಾರ ಮಾಲಿನ್ಯ, ವಾಯುಮಾಲಿನ್ಯ, ,ಶಬ್ದಮಾಲಿನ್ಯ, ಭೂಮಾಲಿನ್ಯ ಬಹಳ ಹೆಚ್ಚಾಗುತ್ತಿದೆ.ಹೀಗೆ ಮುಂದುವರೆದರೆ ಮುಂದಿನ ಪೀಳಿಗೆಗೆ ಒಳ್ಳೆಯ ಪರಿಸರ ಸಿಗುವುದು ಕನಸಿನ ಮಾತಾಗುವುದರಲ್ಲಿ ಆಶ್ಚರ್ಯವಿಲ್ಲ.

ಪರಿಸರ ಮಾಲಿನ್ಯಕ್ಕೆ ಪ್ಲಾಸ್ಟಿಕ್ ನಿಂದಾಗಿ ಆಗುತ್ತಿರುವ ಅನಾಹುತ ಹೇಳತೀರದು. ಆದ್ದರಿಂದ "ಪ್ಲಾಸ್ಟಿಕ್ ಮಾಲಿನ್ಯ ತಡೆಗಟ್ಟಿ " ಇದು ಈ ವರ್ಷ ಪರಿಸರ ದಿನದ ಘೋಷವಾಕ್ಯವಾಗಿದೆ.



ಪ್ಲಾಸ್ಟಿಕ್ ನಮಗೆ ಅವಿಭಾಜ್ಯ ಅಂಗವಾಗಿದೆ.ಎಲ್ಲಾ ಕ್ಷೇತ್ರಗಳಲ್ಲೂ ಪ್ಲಾಸ್ಟಿಕ್ ವಸ್ತುಗಳು ರಾರಾಜಿಸುತ್ತಿವೆ. ಪ್ಲಾಸ್ಟಿಕ್ ಬಹಳ ಕಡಿಮೆ ಬೆಲೆಗೆ ಸಿಗುವುದರಿಂದ ಪ್ಲಾಸ್ಟಿಕ್ ವಸ್ತುಗಳನ್ನು ಉಪಯೋಗಿಸಿ ಅಲ್ಲಲ್ಲಿಯೇ ಎಸೆಯುತ್ತಾರೆ. ಅದು ಭೂಮಿಯಲ್ಲಿ ಕೊಳೆತು ಸೇರುವುದಿಲ್ಲ. ಅಲ್ಲದೇ ಆಹಾರ ಪದಾರ್ಥ ಇರುವಪ್ಲಾಸ್ಟಿಕನ್ನುಎಲ್ಲೆಂದರಲ್ಲಿಎಸೆಯುವುದರಿಂದ ಪ್ರಾಣಿ ಪಕ್ಷಿಗಳು ಪ್ಲಾಸ್ಟಿಕನ್ನು ತಿಂದು ಸಾಯುತ್ತವೆ. ಇದರಿಂದಾಗಿ ಪರಿಸರದ ಸಮತೋಲನ ತಪ್ಪುತ್ತದೆ. ಇನ್ನೂ ಸಮುದ್ರದ ತೀರದಲ್ಲಂತೂ ಪ್ಲಾಸ್ಟಿಕ್ ಮಾಲಿನ್ಯವನ್ನು ಕೇಳುವುದೇ ಬೇಡ. ಜನರು ಮೋಜು ಮಸ್ತಿ ಮಾಡಿ ಅಲ್ಲೇ ಪ್ಲಾಸ್ಟಿಕ್ ಪದಾರ್ಥಗಳನ್ನು ಎಸೆದು ಹೋಗುತ್ತಾರೆ. ಇದು ಸಮುದ್ರದ ನೀರಿನಲ್ಲಿ ಸೇರಿ ಜಲಚರಗಳ ಅವನತಿಗೆ ಕಾರಣವಾಗುತ್ತದೆ.

ಪ್ಲಾಸ್ಟಿಕ್ ಮಾಲಿನ್ಯವನ್ನು ಸ್ವಲ್ಪ ಮಟ್ಟಿಗಾದರೂ ತಡೆಗಟ್ಟಲು, ಪ್ಲಾಸ್ಟಿಕ್ ಪದಾರ್ಥಗಳಿಂದ ಮಾಡಿದ ವಸ್ತುಗಳ ಪರ್ಯಾಯವಾಗಿ ಬೇರೆ ಪದಾರ್ಥಗಳಿಂದ ಮಾಡಿದ ವಸ್ತುಗಳನ್ನು ಉಪಯೋಗಿಸಬೇಕು. ಪ್ಲಾಸ್ಟಿಕ್ ಬ್ಯಾಗ್, ಬಕೇಟ್,ಚಮಚ,ನೀರಿನ ಬಾಟಲ್ ಬದಲಿಗೆ ಬಟ್ಟೆ ಸೆಣಬಿನ ಬ್ಯಾಗ್, ತಾಮ್ರದ, ಸ್ಟೀಲಿನ ಬಕೇಟ್ ಚಮಚ ಬಾಟಲ್ ನ್ನು ಬಳಸಬೇಕು.ಇದರಿಂದ ಪರಿಸರ ಮಾಲಿನ್ಯ ತಡೆಯುವುದರ ಜೊತೆಗೆ ಮಾನವನ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು. ಪ್ರಕೃತಿಯ ಉಳಿವಿಗಾಗಿ ಪ್ಲಾಸ್ಟಿಕ್ ಬಳಕೆಯನ್ನು ತಡೆಯೋಣ. ನಿರ್ಮಲ ಪರಿಸರವನ್ನು ಕಾಪಾಡಿಕೊಳ್ಳೋಣ.

**–ಚೇತನ ಭಾರ್ಗವ, ಬೆಂಗಳೂರು**

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 298 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 06.06.2025 • ಶುಕ್ರವಾರ • ಪುಟ:04 • ಬೆಲೆ:2
Volume:02 • Issue: 298 • PRGI No:KARKAN/2023/88055 • VIJAYANAGARA • 06.06.2025 • Friday • Page:04 • Rs:2










## ಬಕ್ರೀದ್ : ಜಿಲ್ಲೆಯಾದ್ಯಂತ ಅನಧೀಕೃತ ಗೋವು, ಒಂಟೆ ಸಾಗಾಣಿಕೆ ಮತ್ತು ವಧೆ ನಿಷೇಧ

■ ಹಂಪಿ ಟೈಮ್ಸ್ ಬಳ್ಳಾರಿ

ಬಕ್ರೀದ್ ಹಬ್ಬದ ನಿಮಿತ್ತ ಜಿಲ್ಲೆಯಲ್ಲಿ ಅನಧೀಕೃತ ಗೋವು, ಒಂಟೆಗಳ ಸಾಗಾಣಿಕೆ ಮತ್ತು ವಧೆ ಮಾಡುವುದನ್ನು ನಿಷೇಧಿಸಲಾಗಿದೆ ಎಂದು ಮಹಾನಗರ ಪಾಲಿಕೆ ಆಯುಕ್ತರು ತಿಳಿಸಿದ್ದಾರೆ.

ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ದೇಶದಲ್ಲೆಡೆ ಅನಧಿಕೃತ ಗೋವು, ಒಂಟೆಗಳ ಸಾಗಾಣಿಕೆ ಮತ್ತು ವಧೆಯನ್ನು ನಿಷೇಧಿಸಲಾಗಿದೆ. ಈ ನಿಟ್ಟಿನಲ್ಲಿ ಜಿಲ್ಲೆಯಲ್ಲಿ ಬಕ್ರಿದ್ ಹಬ್ಬದ ಅಚರಣೆ ಪ್ರಯುಕ್ತ ಅಕ್ರಮ ಗೋವು, ಒಂಟೆಗಳ ಸಾಗಾಣಿಕೆ ಮತ್ತು ವಧೆಯನ್ನು ತಡೆಗಟ್ಟಲು ಸೂಕ್ತ ಕ್ರಮ ಕೈಗೊಳ್ಳಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಎಲ್ಲಾ ಸಂಬಂಧಪಟ್ಟ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಸಭೆ ನಡೆಸಲಾಗಿದೆ.

ಜಿಲ್ಲೆಯಾದ್ಯಂತ ಇರುವ ಚೆಕ್‌ಪೋಸ್ಟ್‌ಗಳಲ್ಲಿ ಪಶುಸಂಗೋಪನಾ ಇಲಾಖೆ ಅಧಿಕಾರಿಗಳು, ಪೊಲೀಸ್ ಇಲಾಖೆ ಮತ್ತು ಆರ್.ಟಿ.ಓ ಇಲಾಖೆ ಅಧಿಕಾರಿಗಳು ಕಾರ್ಯನಿರ್ವಹಿಸಿ ಕಟ್ಟುನಿಟ್ಟಿನ ನಿಗಾವಹಿಸಲು ಸೂಚಿಸಿದ್ದಾರೆ.

ಹಾಗಾಗಿ ಅಕ್ರಮ ಗೋವು, ಒಂಟೆಗಳ ಸಾಗಾಣಿಕೆ ಮತ್ತು ವಧೆ ಕಂಡುಬಂದಲ್ಲಿ ಸಾರ್ವಜನಿಕರು ಪಶುಸಂಗೋಪನಾ ಇಲಾಖೆಯ ಮೊ.80392-275146 ಅಥವಾ 112 ಗೆ ಕರೆಮಾಡಿ ಪೊಲೀಸ್ ಇಲಾಖೆಯ ಅಧಿಕಾರಿಗಳಿಗೆ ತಿಳಿಸಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪ್ಲಾಸ್ಟಿಕ್ ಬಳಕೆಗೆ ಗುಡ್‌ಬೈ ಹೇಳಿ

### ವಿಜಯನಗರ ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣಪ್ಪ ಹೇಳಿಕೆ | ವಿಶ್ವ ಪರಿಸರ ದಿನಾಚರಣೆ

### ಪರಿಸರ ದಿನವೆಂದರೆ ಬರಿ ಗಿಡ ನೆಡುವುದಲ್ಲ – ಪರಿಸರ ಮಾಲಿನ್ಯಗೊಳಿಸದಂತೆ ಸಂಕಲ್ಪ ಮಾಡಿ

■ ಹಂಪಿ ಟೈಮ್ಸ್ ಹೊಸಪೇಟೆ

ನಿತ್ಯ ಜೀವನ ಶೈಲಿಯಲ್ಲಿ ಪ್ಲಾಸ್ಟಿಕ್ ಮುಕ್ತವಾಗಿ ಬದುಕುವ ವಿಧಾನವನ್ನು ಪ್ರತಿಯೊಬ್ಬರು ಅಳವಡಿಸಿಕೊಂಡರೆ ವಿಶ್ವ ಪರಿಸರ ದಿನ ಅರ್ಥಪೂರ್ಣವಾಗಿ ಆಚರಿಸಿದಂತಾ ಗಲಿದೆ ಎಂದು ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣಪ್ಪ ಹೇಳಿದರು.

ನಗರದ ವಿಜಯನಗರ ಕಾಲೇಜು ಆವರಣದಲ್ಲಿ ಜಿಲ್ಲಾಡಳಿತ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಪ್ರಾದೇಶಿಕ ಕಚೇರಿ, ವಿಜಯನಗರ ಮಹಾವಿದ್ಯಾಲಯ ಸಹಯೋಗದಲ್ಲಿ ಏರ್ಪಡಿಸಿದ್ದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಈ ವರ್ಷ ಸರ್ಕಾರದಿಂದ ಪರಿಸರ ದಿನಾಚರಣೆಗೆ 'ಜಾಗತಿಕವಾಗಿ ಪ್ಲಾಸ್ಟಿಕ್ ಮಾಲಿನ್ಯ ಕೊನೆಗೊಳಿಸುವುದು' ಎಂಬ ಘೋಷವಾಕ್ಯವನ್ನು ಹೊರಡಿಸಿದೆ. ಪ್ಲಾಸ್ಟಿಕ್ ಬಳಕೆಯ ಗಂಭೀರತೆಯನ್ನು ಅರಿಯಬೇಕಿದೆ. ಪರಿಸರ ದಿನವೆಂದರೇ ಕೇವಲ ಗಿಡ ನೆಡುವುದಷ್ಟೇ ಅಲ್ಲ. ನಮ್ಮ ಸುತ್ತಲಿನ ಪರಿಸರವನ್ನು ಮಾಲಿನ್ಯ ಮುಕ್ತಗೊಳಿಸುವುದು. ಮಾಲಿನ್ಯಕ್ಕೆ ಯಾವುದೇ ಪ್ರಾಣಿಗಳು ಕಾರಣವಲ್ಲ. ಮನುಷ್ಯನೇ ಮೂಲ ಕಾರಣವಾಗಿದ್ದಾನೆ. ಜಲ, ಶಬ್ದ, ವಾಯು, ವಾತವರಣ ಸೇರಿ ಯಥೇಚ್ಛಾವಾಗಿ ಮಾಲಿನ್ಯ




ಮಾಡುತ್ತಿರುವುದು ಮುಂದಿನ ಪೀಳಿಗೆಗೆ ಮಾರಕವಾಗಿದೆ. ಮಾಲಿನ್ಯ ನಿಯಂತ್ರಣ ಕೇವಲ ಸರ್ಕಾರದ ಹೊಣೆಗಾರಿಕೆ ಅಲ್ಲ. ಸರ್ಕಾರದೊಂದಿಗೆ ಸಾರ್ವಜನಿಕರು ಮತ್ತು ಸಂಘ ಸಂಸ್ಥೆಗಳು ಜಾಗೃತಿ ಮೂಡಿಸಲು ಕೈಜೋಡಿಸಬೇಕಿದೆ. ವಿದ್ಯಾರ್ಥಿ ದಿಸೆಯಲ್ಲಿಪರಿಸರಪ್ರೇಮಿಯಾಗಲುಅಲೋಚಿಸಬೇಕು. ನಮ್ಮಂತಯೇ ವಿವಿಧ ಜೀವಿಗಳು ಪರಿಸರದಲ್ಲಿ ಬದುಕುತ್ತಿವೆ. ಬದುಕುವ ಹಕ್ಕು ಎಲ್ಲರಿಗೂ ಇದೆ. ಶುದ್ಧ ಗಾಳಿ ಸೇವನೆಯಿಂದ ಶ್ವಾಸಕೋಶದ ಆರೋಗ್ಯ ಉತ್ತಮವಾಗಿರಲಿದೆ. ವಿದ್ಯಾರ್ಥಿಗಳಲ್ಲಿ ಬೈಕ್‌ಗಳ ಬಳಕೆಗಿಂದ ಬೈಸಿಕಲ್ ಬಳಕೆ ಹೆಚ್ಚಾಗಲಿ. ತರಕಾರಿ, ಹಾಲು, ದಿನಸಿ ಸಾಮಾಗ್ರಿಗಳ ಖರೀದಿಗಿ ಪ್ಲಾಸ್ಟಿಕ್ ಬಳಕೆ ಬಿಟ್ಟು ಬಿಡಿ. ಮನೆಗಳಲ್ಲಿ ಹಸಿಕಸ, ಒಣ ಕಸ ಬೇರ್ಪಡಿಸಿ ಕಸದ ವಾಹನಗಳಿಗೆ ನೀಡುವಂತಾಗಲಿ. ನಿಮ್ಮ ಸಣ್ಣ ಪುಟ್ಟ ಕೆಲಸಗಳು ಪರಿಸರಕ್ಕೆ ಹಿತವಾಗಲಿದೆ ಎಲ್ಲರೂ ಸಂಕಲ್ಪ ಮಾಡಿ ಪ್ಲಾಸ್ಟಿಕ್ ಬಳಕೆ ತ್ಯಜಿಸೋಣ, ಪ್ಲಾಸ್ಟಿಕ್ ಮಾಲಿನ್ಯ ಕೊನೆಗಾಣಿಸೋಣ ಎಂದರು.

>>4

### ಚಿತ್ರಕಲಾ ಸ್ಪರ್ಧೆ ವಿಜೇತರು

ವಿಶ್ವ ಪರಿಸರ ದಿನಚಾರಣೆ ನಿಮಿತ್ತ ಪ್ರಾಥಮಿಕ ಶಾಲಾ ಮಕ್ಕಳಿಗೆ ಏರ್ಪಡಿಸಿದ್ದ ಚಿತ್ರಕಲಾ ಸ್ಪರ್ಧೆಯಲ್ಲಿ ವಿಜೇತರಾದ ಮಹಿಳಾ ಸಮಾಜ ಶಾಲೆಯ ವಿದ್ಯಾರ್ಥಿನಿ **ಕು.ಅಜ್ಮೀನಾ ನಾಜ್ (ಪ್ರಥಮ)**, ದೀಪಾಯನ ಶಾಲೆಯ ವಿದ್ಯಾರ್ಥಿ **ಆರ್.ಧನುಷ್ (ದ್ವಿತೀಯ)**, ಜೆಸಿಸ್ ಶಾಲೆಯ ವಿದ್ಯಾರ್ಥಿನಿ **ರಿದಾ ಅಂಜುನ್ (ತೃತೀಯ)**, ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ವಿದ್ಯಾರ್ಥಿನಿ ಟಿ.ಮೇಘಾ (ಸಮಾಧಾನಕರ), ಲಿಟಲ್ ಫ್ಲವರ್ ಶಾಲೆ ವಿದ್ಯಾರ್ಥಿನಿ ಅನ್ನಪೂರ್ಣ(ಸಮಾಧಾನಕರ).

ಪ್ರೌಢಶಾಲೆ ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ದೀಪಾಯನ ಶಾಲೆ ವಿದ್ಯಾರ್ಥಿನಿ **ಬೃಂದಾ.ಇ.ಎಸ್.(ಪ್ರಥಮ)**, ಕೆಎಸ್‌ಪಿಎಲ್ ಪ್ರೌಢಶಾಲೆ **ಅನುಷಾ.ಸಿ.(ದ್ವಿತೀಯ)**, ಮಹಿಳಾ ಸಮಾಜ ಶಾಲೆ ವಿದ್ಯಾರ್ಥಿನಿ **ಎನ್.ಶ್ರಾವಣಿ(ತೃತೀಯ)**, ಲಿಟಲ್ ಫ್ಲವರ್ ಶಾಲೆ ವಿದ್ಯಾರ್ಥಿನಿ ವಿ.ಸಿ.ಗುರುಧನ್ಯಾ(ಸಮಾಧಾನಕರ), ಸಪ್ತಗಿರಿ ಆಂಗ್ಲ ಶಾಲೆ ವಿದ್ಯಾರ್ಥಿನಿ ಸಾಯಿ ಪ್ರಿಯಾ (ಸಮಾಧಾನಕರ) ಬಹುಮಾನ ಮತ್ತು ಪ್ರಶಸ್ತಿ ಪತ್ರಗಳನ್ನು ವಿತರಿಸಲಾಯಿತು.

## ಸೌಲಭ್ಯ ಕೇಳಿದ್ರೆ ಬೆಂಗಳೂರಿನತ್ತ ತೋರಿಸ್ತಾರೆ

### ಸಂಘಟನೆಯ ಜಿಲ್ಲಾಧ್ಯಕ್ಷ ಎನ್.ಯಲ್ಲಾಲಿಂಗ ಆಕ್ರೋಶ | ಕಾರ್ಮಿಕ ಫೆಡರೇಷನ್ ತಾಲೂಕು ಸಮ್ಮೇಳನ




■ ಹಂಪಿ ಟೈಮ್ಸ್ ಹೊಸಪೇಟೆ

ಕಟ್ಟಡ ಹಾಗೂ ರಸ್ತೆ ಫ್ಲೈಓವರ್, ಸೇತುವೆ, ಬೃಹತ್ ಕೈಗಾರಿಕಾ ಕಾರ್ಖಾನೆಗಳಲ್ಲಿ ದುಡಿಯುತ್ತಿರುವ ಕಾರ್ಮಿಕರಿಗೆ ಕಲ್ಯಾಣ ಮಂಡಳಿಯ ಸೌಲಭ್ಯಗಳನ್ನು ತಲುಪಿಸಲು ಸಂಘಟನೆಯ ಕಾರ್ಯಕರ್ತರು ಅವಿರತ ಶ್ರಮ ಹಾಕಲು ಮುಂದಾಗಬೇಕು ಎಂದು ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ.ಮಹಾಂತೇಶ ಕರೆ ನೀಡಿದರು.

ನಗರದ ಸರ್ಕಾರಿ ನೌಕರರ ಭವನದಲ್ಲಿ ಕಟ್ಟಡ ನಿರ್ಮಾಣ ಕಾರ್ಮಿಕರ ಫೇಡರೇಷನ್ 7 ನೇ ತಾಲೂಕು ಸಮ್ಮೇಳನವನ್ನು ಗುರುವಾರ ಉದ್ಘಾಟಿಸಿ ಮಾತನಾಡಿ ದರು. ನಗರದಲ್ಲಿ 10 ಪಂಚಾಯತಿ ಮತ್ತು 2 ಪಟ್ಟಣ ಪಂಚಾಯತಿ ಹಾಗೂ 35 ವಾರ್ಡ್‌ಗಳಲ್ಲಿ ಕಟ್ಟಡ ಹಾಗೂ ರಸ್ತೆ ಫ್ಲೈಓವರ್, ಸೇತುವೆ, ಬೃಹತ್ ಕೈಗಾರಿಕಾ ಫ್ಯಾಕ್ಟರಿಗಳಲ್ಲಿ ಕಟ್ಟಡ ಕಾರ್ಮಿಕರು ದುಡಿಯುತ್ತಿದ್ದಾರೆ. ಕಾರ್ಮಿಕರಿಗೆ ನ್ಯಾಯಯುತವಾಗಿ ಸಿಗಬೇಕಾದ ಸೌಲಭ್ಯಗಳನ್ನು ಕಲ್ಪಿಸುವುದು ಎಲ್ಲರ ಜವಾಬ್ದಾರಿ. ಪ್ರತಿ ಬಾರಿಯೂ ಸಂಘಟನೆಯು ಕಲ್ಯಾಣ ಮಂಡಳಿಯ ತಿರ್ಮಾನ ಕೈಗೊಂಡಿರುವ ಕ್ರಮಗಳ ಬಗ್ಗೆ ಪರಿಶೀಲಿಸಿ ತಪ್ಪುಗಳನ್ನು ತಿದ್ದಿಕೊಳ್ಳುವಂತ ಹೋರಾಟಗಳನ್ನು ನಡೆಸಿದ್ದ ಪರಿಣಾಮವಾಗಿ, ಇತ್ತೀಚಿನ ದಿನಗಳಲ್ಲಿ ಮರಣ ಪರಿಹಾರ 75000 ಸಾವಿರದಿಂದ 1.50 ಲಕ್ಷ ರೂ ಹಾಗೂ ಕೆಲಸದ ಸ್ಥಳದಿಂದ ಮನೆಗೆ ಹೋಗುವಾಗ ಅಪಘಾತ ಸಂಭವಿಸಿದರೆ ಪರಿಹಾರ ಮೊತ್ತವನ್ನು 4 ಲಕ್ಷದಿಂದ 8 ಲಕ್ಷ ರೂಗೆ ಹೆಚ್ಚಿಸಲಿಕ್ಕೆ ಸಾಧ್ಯವಾಗಿದೆ ಎಂದರು.

ಜಿಲ್ಲಾಪ್ರಧಾನ ಕಾರ್ಯದರ್ಶಿ ಎನ್.ಯಲ್ಲಾಲಿಂಗ್ ಮಾತನಾಡಿ, ವಿಜಯನಗರ ಜಿಲ್ಲೆಯ ಪ್ರಮುಖ ಕೇಂದ್ರವಾಗಿರುವ ಹೊಸಪೇಟೆಯಲ್ಲಿ ಜಿಲ್ಲಾ ಕಛೇರಿ ಇದೆ ಇಲ್ಲಿನ ಅಧಿಕಾರಿಗಳು ವರ್ಷ ಕಳೆದರು ಮದುವೆ ಸಹಾಯಧನ, ಮೆಡಿಕಲ್ ಸಹಾಯಧನ, >>4

## ಪರಿಸರ ರಕ್ಷಣೆ ನಮ್ಮೆಲ್ಲರ ಹೊಣೆ



■ ಹಂಪಿ ಟೈಮ್ಸ್ ಕೊಟ್ಟೂರು

ಜಗತ್ತಿನಾದ್ಯಂತ ಪರಿಸರ ಕಲುಷಿತವಾಗದಂತೆ ಮುನ್ನಚ್ಚರಿಕೆ ವಹಿಸಿ ಕಾಪಾಡುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದು ಮಾಜಿ ಸಚಿವ ಬಿ.ಶ್ರೀರಾಮುಲು ಹೇಳಿದರು.

ತಾಲೂಕಿನ ಉಜ್ಜಯಿನಿಯ ಜ್ಞಾನಗುರು ವಿದ್ಯಾಸಂಸ್ಥೆಯ ಶ್ರೀ ದಾರುಕ ಹಿ.ಪ್ರಾ ಶಾಲೆಯಲ್ಲಿ ಗಿಡ ನೆಡುವ ಮೂಲಕ ಪರಿಸರ ದಿನಾಚರಣೆಯಲ್ಲಿ ಗುರುವಾರ ಮಾತನಾಡಿದರು.

ನಮ್ಮೆಲ್ಲರ ಉಸಿರು, ಶುದ್ಧ ಗಾಳಿಗೆ ಪರಿಸರವೇ ಕಾರಣ. ಆದರೆ ಅಂತಹ ಪರಿಸರ ಇಂದು ನಾನಾ ಕಾರಣಗಳಿಂದಾಗಿ ಕಲುಷಿತವಾಗುತ್ತಿದ್ದು, ಮುಂದಿನ ತಲೆಮಾರಿನ ಹೊತ್ತಿಗೆ ಅಪಾಯವಾಗುವ ಸಾಧ್ಯತೆಗಳಿವೆ. ಈಗಾಗಲೇ ಪರಿಸರ ಉಳಿವಿಗಾಗಿ ಎಲ್ಲ ದೇಶಗಳು ನಾನಾ ರೀತಿಯ ಯೋಜನೆಗಳನ್ನು ಹಾಕಿಕೊಂಡಿವೆ. ಅವುಗಳ ಪಾಲನೆ ಕಟ್ಟು ನಿಟ್ಟಾಗಿ ಆಗಬೇಕಿದೆ ಎಂದರು.

ಪರಿಸರ ಕಾಪಾಡುವುದಕ್ಕಾಗಿ ಪ್ರತಿಯೊಬ್ಬ ನಾಗರೀಕನು ಪಣ ತೊಡಬೇಕು. ಶಾಲೆಗಳಲ್ಲಿ ಇದರ ಕುರಿತು ವಿಶೇಷ ಜಾಗೃತಿ ಮೂಡಿಸಬೇಕು. ಮಕ್ಕಳಲ್ಲಿ ಪರಿಸರದ ಮಹತ್ವಗಳನ್ನು ಶಿಕ್ಷಕರು ತಿಳಿಸಿಕೊಡಬೇಕು. ಪರಿಸರಕ್ಕೆ ಮಾರಕವಾಗಿರುವ ಪ್ಲಾಸ್ಟಿಕ್ ಸೇರಿ ಇತರೆ ವಸ್ತುಗಳ ಬಳಕೆಯನ್ನು ಸಂಪೂರ್ಣ ನಿಲ್ಲಿಸುವುದಕ್ಕೆ ನಾವೆಲ್ಲಾ ಮುಂದಾಗೋಣ. ಶಾಲೆ ಮಕ್ಕಳು ಗಿಡ ಮರ ಬೆಳೆಸಿ ಪೋಷಿಸಬೇಕು ಎಂದರು.

ಬಿಜೆಪಿ ಕೂಡ್ಲಿಗಿ ಮಂಡಲ ಅದ್ಯಕ್ಷ ಕಾಮಶೆಟ್ಟಿ ನಾಗರಾಜ, ಪ್ರಧಾನ ಕಾರ್ಯದರ್ಶಿ ಮಂಜುನಾಥ, ಮುಖಂಡರಾದ ಲೋಕೇಶ, ಮರುಳಸಿದ್ದಪ್ಪ, ಕೊಟ್ರೇಶ, ಶಾಲೆ ಮುಖ್ಯಗುರು, ಶಿಕ್ಷಕರು ಇತರರು ಇದ್ದರು.

## ಗಿಡಮರಗಳನ್ನು ಬೆಳೆಸಿದರೆ ಬೇಸಿಗೆಯಲ್ಲಿ ಬೆವರು ತಗ್ಗಲಿದೆ

### ಹ.ಬೊ.ಹಳ್ಳಿ ಪುರಸಭೆ ಅಧ್ಯಕ್ಷ ಎಂ.ಮರಿರಾಮಪ್ಪ ಹೇಳಿಕೆ | ಸರ್ಕಾರ ಸಂಘ–ಸಂಸ್ಥೆಗಳ ಜೊತೆ ಕೈಜೋಡಿಸಿ

■ ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ.

ವಿಶ್ವ ಪರಿಸರ ದಿನಾಚರಣೆಯು ಕೇವಲ ಒಂದು ದಿನದ ಆಚರಣೆಯಾಗಬಾರದು ದಿನನಿತ್ಯದ ಜೀವನದಲ್ಲಿ ಪರಿಸರದ ಬಗ್ಗೆ ಖಾಳಜಿ ವಹಿಸುವ ಮೂಲಕ ಸಾಮಾಜಿಕವಾಗಿ ಪರಿಸರ ಸಂರಕ್ಷಣೆಯ ಬಗ್ಗೆ ಜಾಗೃತಿ ನೀಡಬೇಕು ಎಂದು ಪುರಸಭೆ ಅಧ್ಯಕ್ಷ ಎಂ.ಮರಿರಾಮಪ್ಪ ಹೇಳಿದರು.



ಪಟ್ಟಣದ ರಾಮನಗರದಲ್ಲಿರುವ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ವಿಶ್ವ ಪರಿಸರ ದಿನಾಚರಣೆ ನಿಮಿತ್ತ ಸಸಿ ನೆಟ್ಟು ಮಾತನಾಡಿದರು. ಪ್ರಪಂಚದಾದ್ಯಂತ ಪ್ರತೀ ವರ್ಷ ಜೂ.5ರಂದು ವಿಶ್ವ ಸಂಸ್ಥೆಯ ಪರಿಸರ ಕಾರ್ಯಕ್ರಮದಡಿಯಲ್ಲಿ ವಿಶ್ವ ಪರಿಸರ ದಿನಾಚರಣೆ ಆಚರಿಸಲಾಗುತ್ತದೆ. ಪರಿಸರ ಸಂರಕ್ಷಣೆ ಕೇವಲ ಸರ್ಕಾರಗಳ ಹಾಗೂ ಸಂಘ–ಸಂಸ್ಥೆಗಳ ಜವಾಬ್ದಾರಿಯಲ್ಲ, ಪ್ರತಿಯೊಬ್ಬ ವ್ಯಕ್ತಿಯೂ ಪರಿಸರದ ಬಗ್ಗೆ ಕಾಳಜಿವಹಿಸುವ ಮೂಲಕ ಜಾಗತಿಕ ತಾಪಮಾನ ಹೆಚ್ಚಳ, ಅರಣ್ಯ ನಾಶ ಹಾಗೂ ಮಾಲಿನ್ಯ ನಿಯಂತ್ರಣದಂಹ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ದಿನನಿತ್ಯದ ಜೀವನವನ್ನು ನಡೆಸುವುದು ನಮ್ಮೆಲ್ಲರ ಹೊಣೆಯಾಗಿದೆ. ಪ್ಲಾಸ್ಟಿಕ್ ಬಳಕೆಯ ದುಷ್ಪರಿಣಾಮಗಳನ್ನು ಸಾರ್ವಜನಿಕವಾಗಿ ಜಾಗೃತಿ ಮೂಡಿಸಿ ಪರಿಸರ ಸಂರಕ್ಷಣೆಗೆ ಮುಂದಾಗುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದರು.

ಈ ಸಂದರ್ಭದಲ್ಲಿ ಪುರಸಭೆ ಸದಸ್ಯರಾದ ಜೋಗಿ ಹನುಮಂತಪ್ಪ, ಕೆ.ಎಂ.ನವೀನ್, ಬ್ಯಾಡಗಿ ರಾಜೇಶ್, ಸೆರಗಾರ ಹುಚ್ಚಪ್ಪ, ಅಜೀಜುಲ್ಲಾ ಮುಖಂಡರಾದ ಗುಂಡ್ರು ಹನುಮಂತ, ಅಲ್ಲಾಭಕ್ಷಿ, ಚಿಂತ್ರಪಳ್ಳಿ ದೇವೇಂದ್ರಪ್ಪ, ಹೆಚ್.ಎಂ.ವಿಜಯಕುಮಾರ, ಬಾಳಪ್ಪ ಉಪ್ಪಾರ, ದಾದಾಪೀರ್, ಪುರಸಭೆ ಮುಖ್ಯಾಧಿಕಾರಿ ಪ್ರಭಾಕರ್ ಪಾಟೀಲ್, ಪರಿಸರ ಅಧಿಕಾರಿ ಜಗದೀಶ, ಎಸ್‌ಡಿಎಂಸಿ ಅಧ್ಯಕ್ಷ ಶ್ಯಾಬುದ್ದಿನ್, ಮುಖ್ಯಗುರು ಮುರಘರಾಜೇಂದ್ರ ಸೇರಿದಂತೆ ಶಾಲಾ ಶಿಕ್ಷಕರು ಪೌರಕಾರ್ಮಿಕರು, ಮತ್ತಿತರರಿದ್ದರು.


**ನಗರಸಭಾ ಕಾರ್ಯಾಲಯ ಹೊಸಪೇಟೆ.**

ಕ್ರಸಂ:ನಸಹೊ/ತಾಂತ್ರಿಕ/ಕಾಮಗಾರಿ/ಟೆಂಡರ್/2025-26. ದಿನಾಂಕ:03-06-2025.

**ಟೆಂಡರಿಗಾಗಿ ಆಹ್ವಾನ (ಐ.ಎಫ್.ಟಿ.) ಪ್ರಕಟಣೆ(ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ)**

2025–26ನೇ ಸಾಲಿನ 15ನೇ ಹಣಕಾಸು ಮುಕ್ತ ಅನುದಾನ, ಎಸ್ ಎಫ್ ಸಿ ಕುಡಿಯುವ ನೀರು ಹಾಗೂ ಎಸ್ ಎಫ್ ಸಿ 5% ಮತ್ತು ಎ ಎಫ್ ಸಿ, ಎಸ್. ಸಿ .ಎ. ಪಿ ಅನುದಾನದ ಅಡಿಯಲ್ಲಿ ಈ ಕೆಳಗಿನ ಕೆಲಸಗಳಿಗಾಗಿ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ (2020–2025 ನೇ ಸಾಲಿನಲ್ಲಿ ನೊಂದಾಯಿತ) ಸೂಕ್ತ ದರ್ಜೆಯಲ್ಲಿ ನೊಂದಾಯಿತ ಅರ್ಹಗುತ್ತಿಗೆದಾರರಿಂದ ಸ್ಟ್ಯಾಂಡರ್ಡ್‌ಟೆಂಡರ್ ಡಾಕ್ಯುಮೆಂಟ್ ನಿಯಮಾವಳಿಯಂತೆ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಗುತ್ತಿಗೆದಾರರು ತಮಗೆ ಬೇಕಾದ ಟೆಂಡರ್ ವಿವರಗಳನ್ನು**www.kppp.karnataka.govt.in**ವೆಬ್‌ಸೈಟ್ ಮೂಲಕ ಪಡೆದುಕೊಂಡು, ಸದರಿ ಇ–ಪ್ರೋಕ್ಯೂರ್‌ಮೆಂಟಿನ ಷರತ್ತಿಗೊಳಪಟ್ಟು ಭರ್ತಿ ಮಾಡಿದ ಟೆಂಡರ್‌ಗಳನ್ನು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಬಹುದು.

1)ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: **18–06–2025 ಸಂಜೆ 5.00 ಗಂಟೆವರೆಗೆ**
2)ಟೆಂಡರ್‌ಗಳನ್ನು ತೆರೆಯುವ ದಿನಾಂಕ : **19–06–2025 ಸಂಜೆ 5.10 ಗಂಟೆ ನಂತರ**
3)ಟೆಂಡರ್‌ಗಳನ್ನು ತೆರೆಯುವ ಸ್ಥಳ: **ನಗರಸಭೆ, ಹೊಸಪೇಟೆ.**

| ಕ್ರ.ಸಂ | ಪ್ಯಾಕೇಜ್ ಸಂಖ್ಯೆ | ಇಂಡೆಂಟ್ ನಂಬರ್ | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|---|
| 1 | ಪ್ಯಾಕೇಜ್ ಸಂಖ್ಯೆ : 01 | DMA/2025-26/EL/WORK_INDENT 41648 | 29.50 |
| 2 | ಪ್ಯಾಕೇಜ್ ಸಂಖ್ಯೆ : – | DMA/2025-26/WS/WORK_INDENT 41615 | 9.32 |
| 3 | ಪ್ಯಾಕೇಜ್ ಸಂಖ್ಯೆ : – | DMA/2025-26/EL/WORK_INDENT 41625 | 3.65 |
| 4 | ಪ್ಯಾಕೇಜ್ ಸಂಖ್ಯೆ : – | DMA/2025-26/EL/WORK_INDENT 41618 | 10.00 |

ಸಹಿ/– ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ನಗರಸಭೆ ಹೊಸಪೇಟೆ | ವಾ.ಸಾ.ಸಂ.ಇ/ವಿಜಯನಗರ/2025–26/ ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/89 | ಸಹಿ/–ಪೌರಾಯುಕ್ತರು, ನಗರಸಭೆ ಹೊಸಪೇಟೆ.

DC & SSLC TOPER TALK

scan to watch video



ನಿಮ್ಮ ಮಗುವಿನ ಉಜ್ವಲ ಭವಿಷ್ಯಕ್ಕೆ
ಸರ್ಕಾರಿ ಶಾಲೆಗಳೇ ಆಧಾರ...
(For your child's bright future, government schools are the foundation)

ಸರ್ಕಾರಿ ಶಾಲೆಗಳಲ್ಲಿ 2025-26ನೇ ಸಾಲಿನ ಪ್ರವೇಶ ಉಚಿತ FREE Admission

ಬನ್ನಿ, ಬೆಂಬಲಿಸಿ, ಸರ್ಕಾರಿ ಶಾಲೆಗಳನ್ನು ಬಲಪಡಿಸಿ (Come, support, strengthen government schools.) - ಹಂಪಿ ಟೈಮ್ಸ್ ಬಳಗ, ವಿಜಯನಗರ

## ನಿತ್ಯ ಪಂಚಾಂಗ

ಮಾಸ: ಜ್ಯೇಷ್ಠ । ಸಂವತ್ಸರ: ವಿಶ್ವವಸು

**06–06–2025 – ಶುಕ್ರವಾರ**

| | |
|---|---|
| ತಿಥಿ | : ಏಕಾದಶಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಹಸ್ತ |
| ಯೋಗ | : ವ್ಯತಾಪತಾ |
| ಕರಣ | : ವಾಣಿಜ |
| ಸೂರ್ಯೋದಯ | : 06:41:48 |
| ಸೂರ್ಯಾಸ್ತ | : 19:09:41 |
| ರಾಹು ಕಾಲ | : 10:45–12:26 |
| ಯಮಘಂಡ ಕಾಲ | : 15:48–17:29 |
| ಗುಳಿಕ ಕಾಲ | : 07:23–09:04 |

## ತುಂಗಭದ್ರಾ ನೀರಿನ ಮಟ್ಟ



**ಗುರುವಾರ : 05–06–2025**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1599.66 ಅಡಿ |
| ಒಳ ಹರಿವು | 7460 ಕ್ಯುಸೆಕ್ |
| ಹೊರ ಹರಿವು | 246 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 21.091 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1577.82 ಅಡಿ |
| ಒಳ ಹರಿವು | 517 ಕ್ಯುಸೆಕ್ |
| ಹೊರ ಹರಿವು | 5 ಕ್ಯುಸೆಕ್ |
| ಸಾಮರ್ಥ್ಯ | 3.501 ಟಿಎಂಸಿ |

# ಉನ್ನತ ಹುದ್ದೆಗೆ ಶಿಕ್ಷಣವೇ ಭೂಷಣ

### ಕನ್ನಡ ವಿವಿ ಕುಲಪತಿ ಡಾ.ಡಿ.ವಿ.ಪರಮಶಿವಮೂರ್ತಿ ಹೇಳಿಕೆ। ನೆಟ್, ಕೆ–ಸೆಟ್ ತರಬೇತಿ ಕಾರ್ಯಾಗಾರ



■ **ಹಂಪಿ ಟೈಮ್ಸ್ ಹೊಸಪೇಟೆ**

ಜ್ಞಾನವನ್ನು ಗಳಿಸುವುದರ ಜೊತೆಗೆ ಪಡೆದುಕೊಂಡ ಜ್ಞಾನವನ್ನು ಎಲ್ಲರ ಮುಂದೆ ಹೇಗೆ ಮಂಡಿಸಬೇಕು ಎಂಬುದು ಮುಖ್ಯ. ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಗಂಭೀರವಾಗಿ ತೆಗೆದುಕೊಳ್ಳಿ ಓದು ನಿರಂತರವಾಗಿ ಬೇಕು ಮತ್ತು ಹೆಚ್ಚು ಶ್ರಮವಹಿಸಬೇಕು ಎಂದು ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಾ.ಡಿ.ವಿ. ಪರಮಶಿವಮೂರ್ತಿ ಹೇಳಿದರು.

ಕನ್ನಡ ವಿಶ್ವವಿದ್ಯಾಲಯದ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದ ವತಿಯಿಂದ ಪಂಪ ಸಭಾಂಗಣದಲ್ಲಿ 21 ದಿನಗಳ ಯುಜಿಸಿ ನೆಟ್ ಮತ್ತು ಕೆ–ಸೆಟ್ ತರಬೇತಿ ಕಾರ್ಯಾಗಾಕ್ಕೆ ಬುಧವಾರ ಚಾಲನೆ ನೀಡಿ ಮಾತನಾಡಿದರು. ಚಿಕ್ಕವಯಸ್ಸಿನಲ್ಲೇ ಉನ್ನತ ಸ್ಥಾನಪಡೆಯುವ ಬಯಕೆ ನಿಮಗಿರಲಿ. ಸರ್ಕಾರ ನೀಡುವ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಳ್ಳಿ ಎಂದರು.

ಕುಲಸಚಿವ ಡಾ. ವಿಜಯ್ ಪೂಣಚ್ಚ ತಂಬಂಡ ಮಾತನಾಡಿ, ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕಾರ್ಯಾಗಾರಗಳು ಶೈಕ್ಷಣಿಕ ವಾತವರಣವನ್ನು ರೂಪಿಸುತ್ತವೆ. ಇದರ ಸದುಪ ಯೋಗಪಡಿಸಿಕೊಳ್ಳಿ. ಸ್ಪರ್ಧಾತ್ಮಕ ಪರೀಕ್ಷೆ ಗಳಲ್ಲಿ ಯಶಸ್ವಿಯಾಗಲಿಲ್ಲ ಎಂದ ಮಾತ್ರಕ್ಕೆ ಜೀವನದಲ್ಲಿ ಸೋತೆವೆಂದು ಅಲ್ಲ, ಅದರ ಆಚೆಗೆ ನಿಮ್ಮಲ್ಲಿರುವ ಜ್ಞಾನವನ್ನು ಬಳಸಿಕೊಂಡು ಬದುಕು ಕಟ್ಟಿಕೊಳ್ಳಿ ಎಂದರು.

ಶಿರಹಟ್ಟಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಡಾ. ಅನುಷಾ ಎಚ್.ಸಿ ಮಾತನಾಡುತ್ತ ವಿಶ್ವವಿದ್ಯಾಲಯಗಳು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ತರಬೇತಿಗಳನ್ನು ನಡೆಸುವುದು ತುಂಬಾ ವಿರಳ. ಆದರೆ ಕನ್ನಡ ವಿಶ್ವವಿದ್ಯಾಲಯವು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಒತ್ತುಕೊಟ್ಟು ತರಬೇತಿ ಕಾರ್ಯಾಗಾರವನ್ನು ಹಮ್ಮಿಕೊಂಡಿರುವುದು ತುಂಬಾ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ತುಂಬಾ ಮಹತ್ವದ ಕಾರ್ಯ. ದುಡಿಮೆಯಿಲ್ಲದ ಯಾವುದೇ ಪದವಿಗಳಿಗೆ ಬೆಲೆಯಿಲ್ಲ. ಈ ನೆಲೆಯಲ್ಲಿ ಶಿಕ್ಷಣ ಸಂಸ್ಥೆಗಳು ಪದವಿಗಳ ಜೊತೆಗೆ ಇಂತಹ ತರಬೇತಿ ಕಾರ್ಯಾಗಾರಗಳನ್ನು ಹಮ್ಮಿಕೊಂಡುವುದರಿಂದ ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಗೆಲ್ಲಲ್ಲು ಸಾಧ್ಯ ಎಂದರು.

ಸಮಾಜಶಾಸ್ತ್ರ ಅಧ್ಯಯನ ವಿಭಾಗದ ಮುಖ್ಯಸ್ಥ ಡಾ.ಯರ್ರಿಸ್ವಾಮಿ ಮಾತನಾಡಿ, ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕಾರ್ಯಾಗಾರಗಳು ವಿದ್ಯಾರ್ಥಿಗಳಲ್ಲಿ ಸ್ಪರ್ಧಾತ್ಮಕ ಗುಣವನ್ನು ಬೆಳಸುತ್ತವೆ ಮತ್ತು ಆತ್ಮವಿಶ್ವಾಸವನ್ನು ಮೂಡಿಸುತ್ತವೆ. ಜೊತೆಗೆ ವೃತ್ತಿ ಜೀವನವನ್ನು ಚೆನ್ನಾಗಿ ನಿಭಾಯಿಸಲು ಸಹಾಯಕವಾಗುತ್ತವೆ ಎಂದರು.

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದ ಮುಖ್ಯಸ್ಥ ಡಾ.ವೆಂಕಟಗಿರಿ ದಳವಾಯಿ ಪ್ರಾಸ್ತಾವಿಕವಾಗಿ ಮಾತನಾಡಿ, ಕಳೆದ ಸಾಲಿನಲ್ಲಿ 17 ದಿನಗಳ ಕಾರ್ಯಾಗಾರವನ್ನು ಹಮ್ಮಿಕೊಂಡಿದ್ದೆವು. ಈ ಬಾರಿ 21 ದಿನಗಳ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ. ನೆಟ್–ಸೆಟ್ ಪರೀಕ್ಷೆಯ ವಿದ್ವಾಂಸರು ಮತ್ತು ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ವಿಯಾದ ವ್ಯಕ್ತಿಗಳು 24 ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಲಿದ್ದಾರೆ ಎಂದರು.

ಈ ಸಂದರ್ಭದಲ್ಲಿ ವಿವಿಧ ವಿಭಾಗಗಳ ಮುಖ್ಯಸ್ಥರು, ಸಂಶೋಧನಾರ್ಥಿಗಳು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಪರಿಸರ ದಿನ ಚಿತ್ರಸುದ್ದಿ

# ಪ್ಲಾಸ್ಟಿಕ್ ಬಳಕೆಗೆ ಗುಡ್‌ಬೈ ಹೇಳಿ




3ನೇ ಪುಟದಿಂದ

ಇದಕ್ಕೂ ಮುನ್ನ ಕಾಲ್ತುಳಿತ ದುರಂತದಲ್ಲಿ ಸಾವನ್ನಪ್ಪಿದವರ ಆತ್ಮಕ್ಕೆ ಶಾಂತಿ ಕೋರಿ ಮೌನಾಚರಣೆ ನಡೆಸಲಾಯಿತು. ವಿವಿಧ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ನಗರದ ವಿಜಯನಗರ ಕಾಲೇಜಿನಿಂದ ಡಾ.ಪುನೀತ್‌ರಾಜಕುಮಾರ್ ವೃತ್ತದವರೆಗೆ ಪರಿಸರ ಜಾಗೃತಿ ಬಗ್ಗೆ ಘೋಷಣೆಗಳನ್ನು ಕುಗುತ್ತಾ ಜಾಥಾ ನಡೆಸಲಾಯಿತು.

ಪರಿಸರ ಮತ್ತು ವನ್ಯಜೀವಿ ತಜ್ಞ ಡಾ.ಅಬ್ದುಲ್ ಸಮದ್ ಕೊಟ್ಟೂರು ವಿಶೇಷ ಉಪನ್ಯಾಸ ನೀಡಿದರು. ಪರಿಸರ ಅಧಿಕಾರಿ ಹೆಚ್.ಎ.ಮೀನಾಕ್ಷಿ ಪ್ರಾಸ್ತಾವಿಕ ನುಡಿದರು. ವೇದಿಕೆಯಲ್ಲಿ ಹಿರಿಯ ಪರಿಸರ ಅಧಿಕಾರಿ ಬಿ.ಎಸ್.ಮುರಳಿಧರ್, ವಿಜಯನಗರ ಕಾಲೇಜಿನ ಪ್ರಾಚಾರ್ಯ ಡಾ.ಎಂ.ಪ್ರಭುಗೌಡ, ಪರಿಸರವಾದಿ ರವಿಕುಮಾರ್ ಇದ್ದರು. ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಕಚೇರಿ ಸಿಬ್ಬಂದಿಗಳಾದ ಮಂಜುನಾಥ, ಶೇಖರಪ್ಪ ನಿರ್ವಹಿಸಿದರು.

14 ಭಾಷೆಗಳಲ್ಲಿ
ಹಂಪಿ ಟೈಮ್ಸ್ ವೆಬ್‌ನ್ಯೂಸ್‌ಗೆ
ಭೇಟಿ ನೀಡಿ, ನಿಮ್ಮ ಮಾತೃಭಾಷೆಯಲ್ಲಿ ಸುದ್ದಿ, ಲೇಖನ ಓದಿರಿ...
www.hampitimes.com

# ಮರೆವು ವರವೋ ಶಾಪವೋ?



ಮನುಷ್ಯನಿಗೆ ಮರವು ಸಹಜ ಕ್ರಿಯೆ, ಮರೆವು ನಲ್ಲಿ ನಾನಾ ವಿಧಗಳಿವೆ ಮರೆವು ಮೆದುಳಿಗೆ ಸಂಬಂಧಿಸಿದಂತೆ ಕೆಲಸ ಮಾಡುವ ಸಂವೇದಿ. ಮರೆವು ಯಾವುದಾದರು ವಸ್ತುವನ್ನು ಒಂದು ಸ್ಥಳದಲ್ಲಿ ಇಟ್ಟು ಸ್ವಲ್ಪ ಸಮಯ ದಿನಗಳ ನಂತರ ಆ ವಸ್ತುನ್ನು ಎಲ್ಲಿ ಎಂದು ಕೇಳಿದರೆ ನಮ್ಮ ನೆನಪಿಗೆ ಬರುವದಿಲ್ಲ ಇದು ಮೆದುಳಿನ ಕೆಲಸ ಇಂತಹ ಸಂದರ್ಭವನ್ನು ಮರೆವು ಎಂದು ಹೇಳಬಹುದು. ಮರೆವು ಮಕ್ಕಳಲ್ಲಿ ಬಹಳ ಕಡಿಮೆ, ಅರವತ್ತು ವರ್ಷಗಳಿಗಿಂತ ಹಿರಿಯರಲ್ಲಿ ಹೆಚ್ಚಾಗಿ ಕಂಡು ಬರುತ್ತದೆ ಮದ್ಯ ವಯಸ್ಸಿನಲ್ಲಿ ಸ್ವಲ್ಪ ಕಡಿಮೆ, ಅರವತ್ತರ "ಅರವು–ಮರೆವು "ಅಂತ ಗಾದೆ ಇದೆ. ಮರೆವುಗಳಲ್ಲಿ ನಾವು ಬಸ್ಸಿನಲ್ಲಿ, ರೈಲಿನಲ್ಲಿ,ಪ್ರಯಾಣಿಸುವಾಗ ತೆಗೆದು ಕೊಂಡು ಹೋದ ಬುತ್ತಿ ಚೀಲವನ್ನು ಬಿಟ್ಟು ಬಂದಿರತ್ತೇವೆ. ದೇವಸ್ಥಾನಕ್ಕೆ ಹೋದರೆ ಪೂಜಾ ಸಾಮಗ್ರಿಗಳನ್ನು ರೆಡಿ ಮಾಡಿಟ್ಟು ಕೊಂಡು ನಂತರ ಬಿಟ್ಟು ಹಾಗೆ ಹೋಗುವದು, ಮನೆಯಲ್ಲಿ ಮೋಬೈಲ್, ಕೀಬಂಚ್ ಮಹಿಳೆಯರು, ದುಡ್ಡಿನ ಪರ್ಸನ್ನು ಎಲ್ಲಿಟ್ಟಿದ್ದೇವೆಂದು ನೆನಪಿಲ್ಲದೆ ಮನೆಯಲ್ಲಾ ಹುಡುಕುವದು, ಇದು ಒಂದು ರೀತಿಯ ಮರೆವು.

ನಾವುಗಳು ಊರಿಂದ ಬೇರೆ ಕಡೆ ಹೋದಾಗ ಮನೆಯಲ್ಲಿ ಛತ್ರಿ ಯನ್ನು ಬಿಟ್ಟು ಹೋಗುವದು, ರೈತರು ಬಾರಿಕೋಲನ್ನು ಬಿಟ್ಟು ಹೋಗಿ ಹೆಗಲ ಮೇಲಿದೆ ತಿಳಿಯುವದು, ನಂತರ ಕೆಲಸ ಕ್ಕೆ ಬೇಕಾದಾಗ ಹುಡುಕುವದು.

ಕೆಲವೊಂದು ಸಲ ಅಬ್ಯಾಸ ಬಲದ ಮರೆವು! ಹೇಗಂದರೆ ನಾವುಗಳು ದಿನಾಲು ದೇವಸ್ಥಾನ ಕ್ಕೆ ಹೋಗುತ್ತಿರುತೇವೆ ಹಾಗೆನಾ ಹಾಗಾಗ್ಗೆ ಕಾಳಿನ ಡಬ್ಬಿ ಹಿಡಿದುಕೊಂಡು ಗಿರಣಿಗೂ ಹೋಗುತಿರುತ್ತೇವೆ ಒಂದೊಂದು ಸಲ ಗಿರಣಿಗೆ ಹೊಗಬೇಕಾದ ನಾವುಗಳು ಕಾಳಿನ ಡಬ್ಬಿಯನ್ನು ಹಿಡಿದುಕೊಂಡು ದೇವಸ್ಥಾನದ ಮುಂದೆ ಹೋಗಿ ಬಿಡುತ್ತೇವೆ ಆವಾಗ ನೆನಪಾಗಿ ಅಯ್ಯೋ ಇಲ್ಲಿಗೆ ಬಂದಿದ್ದೇನೆಂದು ಗಿರಣಿಯ ನೆನಪಾಗಿ ಅಲ್ಲಿಗೆ ಹೊಗುವದು. ಇದು ಕೂಡ ಮರವು,

ಮನೆಯಲ್ಲಿ ಮಹಿಳೆಯರು ಅಡುಗೆ ಮನೆಯಲ್ಲಿ ಒಲೆಯಹಾಲನ್ನು ಇಟ್ಟು ಬಂದದು ಹಾಲ್ ನಲ್ಲಿ ಟಿವಿ ನೋಡುತ್ತಾ ಕುಳಿತಾಗ ಹಾಲು ಹುಕ್ಕಿ ವಾಸನೆ ಬಂದಾಗ, ಹಾಲಿನ ನೆನಪಾಗಿ ಅಯ್ಯೋ ಎಂದು ಅಡುಗೆ ಮನೆಗೆ ಓಡುವದನ್ನು ನೋಡಿದ್ದೇನೆ. ಕೆಲವೊಮ್ಮೆ ಅಡುಗೆಯನ್ನು ವಿದ್ಯುತ್ ಒಲೆಯ ಮೇಲೆ ಮಾಡಲು ಹೋಗಿ ವಿದ್ಯುತ್ ಹೋದಾಗ ಊರಿಗೆ ಹೋಗುವ ಅವಸರದಲ್ಲಿ ಹಾಗೆ ಹೋಗಿಬಿಟ್ಟು ವಿದ್ಯುತ್ ಬಂದಾಗ ಒಲೆಗೆ ಹೋಗಿದ್ದ ಬೆಂಕಿ ಹತ್ತಿಕೊಂಡು ಉರಿದು ಅನಾಹುತಗಳಾಗಿದ್ದ ಸಂದರ್ಭಗಳು ಉಂಟು.

ಕೆಲವೊಂದು ಸಲ ಬೈಕ್ ನಡೆಸವಾಗ ಸಂಗಾತಿಯು ಬೈಕ್ ಹತ್ತಿರುವಳೆಂದು ತಿಳಿದು ಹಾಗೆ ಗಾಡಿಯನ್ನು ಓಡಿಸಿಕೊಂಡು ಹೋಗಿ ನಂತರ ತಿಳಿದು ವಾಪಾಸ್ ಬಂದು ಸಂಗಾತಿ ಯನ್ನು ಕರೆದುಕೊಂಡು ಹೋಗಿರವ ಪ್ರಸಂಗಗಳು ಮರೆಯುವಿನಿಂದ ಪಡೆದಿರುತ್ತವೆ. ಮೋಬೈಲ್,ವಾಚ್,ಚಾಳೀಸಾ,ಬೀಗದ ಕೀಬಂಚಗಳನ್ನು, ಕೈಯಲ್ಲಿ ಹಿಡುಕೊಂಡು ಮನೆಯ ತುಂಬೆಲ್ಲಾ ಹುಡುಕಿರುವ ಪ್ರಸಂಗಗಳೂ ಮರೆಯುವಿನಿಂದ ಸಂಭವಿಸುತ್ತೇವೆ.

ತರಗತಿಯಲ್ಲಿ ಕಲಿತ ಅಂಶಗಳನ್ನು ಪರೀಕ್ಷೆಯಲ್ಲಿ ಮರೆತು ಬಿಡುವದರಿಂದ ಪದೇ ಪದೇ ಅಬ್ಯಾಸ ಮಾಡಿಸುತ್ತಾರೆ. ಇದು ಕೂಡ ಮರೆವು. ಮನೆಯಲ್ಲಿ ಯಾರಾದರೂ ತೀರಿಕೊಂಡಾಗ ಇದ್ದ ನೋವು ದುಖಃ ಗಳನ್ನು ಕೆಲವು ದಿನಗಳಲ್ಲಿ ಮರೆತು ಬಿಡುತ್ತೇವೆ. ಚಿಕ್ಕಂದಿನಿಂದ ಕಲಿತ ಕೆಲವು ವಿದ್ಯೆ ಗಳನ್ನು ಮರೆಯುತೇವೆ. ಮನೆಗಳಲ್ಲಿ ಕಳ್ಳತನವಾಗಿ ಬಂಗಾರ ಬೆಳ್ಳಿ ಒಡವೆ ವಸ್ತುಗಳು ಕಳೆದುಕೊಂಡಾಗ ಇದ್ದ ಸಂಕಟ ನೋವುಗಳನ್ನು ನಂತರ ಕ್ರಮೇಣ ಮರೆತು ಬಿಡುತ್ತೇವೆ. ನಾವು ಅಕ್ಕಪಕ್ಕದ ವರೊಂದಿಗೆ ಜಗಳವಾಡಿದ್ದು ಸ್ವಲ್ಪ ದಿನಗಳ ನಂತರ ಮರೆತು ಒಂದಾಗಿ ಬಿಡುತ್ತೇವೆ. ಬಹು ಬೇಗ ಮರೆತು ಬಿಡುವದು ಯಾವುದೆಂದರೆ ಗಂಡ ಹೆಂಡತಿ ಜಗಳ. ರಾತ್ರಿ ಜಗಳ ಮಾಡಿದರೆ ಬೆಳಿಗ್ಗೆ ಜಗಳವಾಡಿದ್ದು ಮರೆತು ಒಂದಾಗಿ ಬಿಟ್ಟಿರುತಾರೆ ಕೆಲವರು ದಿನಾ ಜಗಳವಾಡಿದ್ದು ಮತ್ತೇ ಒಂದಾಗುತ್ತಾರೆ ಕೆಲವರು ಜಗಳವಾಡಿ ಮರೆಯದೆ ವಿಚ್ಛೇದನದ ವರೆಗೆ ಮುಂದು ವರೆಸುತ್ತಾರೆ ಹೀಗೆ ಜನರ ಜೀವನದಲ್ಲಿ ಮರೆವು ಹಾಸು ಹೊಕ್ಕಾಗಿದೆ.



ಇಂತಹ ಮರೆವುಗಳು ಶಾಪವೂ ಅಥವಾ ವರವೂ ನಾವುಗಳು ಆಲೋಚಿಸಿದರೆ ಮರೆವು ವರವು ಹೌದು ಶಾಪವು ಹೌದು.

ವರ ಹೇಗಂದರೆ ಮನೆಗಳಲ್ಲಿ ತಂದೆಯ ಸಾವು ಮಗನ ಮರಣ, ಹೆಂಡಿತಿ ಸಾವುಗಳು, ಕಳ್ಳತನದಿಂದ ಯಾವುದೇ ವಸ್ತುಗಳನ್ನು ಕಳೆದುಕೊಂಡಾಗ, ಬೆಂಕಿ ಪ್ರವಾಹಗಳಿಂದ ಹಾನಿಯಾದಾಗ ಇದ್ದಂತಹ ನೋವು, ಸಂಕಟ, ದುಃಖ ದುಮ್ಮಾನಗಳನ್ನು ಕೆಲವು ದಿನಗಳ ನಂತರ ಮರೆತುಬಿಡುತೇವೆ. ಮರೆಯದೇ ಹಾಗೆ ಇದ್ದರೆ. ಜೀವನ ಪೂರ್ತಿ ಅಳುತ್ತಾ ದುಃಖದಿಂದ ಇದ್ದರೆ, ನೆಮ್ಮದಿಯ ಜೀವನವೇ ಸಿಗದಂತಾಗುತ್ತದೆ ಮರೆಯುವಿನಿಂದ ಇವು ಯಾವೂ ಕೂಡ ಬಹಳ ಸಮಯ ಉಳಿಯುವದುಲ್ಲ. ಆಗ ನಮ್ಮ ಜೀವನಕ್ಕೆ ನೆಮ್ಮದಿ ಸಿಗುತ್ತದೆ. ಈಗ ಮರೆವು ವರವಾಗಿ ಪರಿಣಮಿಸಿತು.

ಶಾಪವು ಹೇಗೆಂದರೆ ನಾವು ಕಲಿತ ಜ್ಞಾನ, ವಿದ್ಯೆ ಮರೆಯದ್ದಿದರೆ ನಾವೆಷ್ಟು ಬುದಿವಂತರು ಜಾಣರೂ ಆಗಿರತಿದ್ದೆವು ನಮ್ಮ ಸರಿಸಾಟಿ ಯಾರು ಇರುತ್ತಿರಲಿಲ್ಲ. ಹೌದು ನಾವುಗಳು ಕಲಿತ ವಿದ್ಯೆ ಮರೆಯ ದಿದ್ದರೆ ಇದುವರೆಗೂ, 70 ವರ್ಷಗಳ ನೆನಪು ಮೆದುಳಿನಲ್ಲಿ ಉಳಿದಿದ್ದರೆ ನಮ್ಮ ಒಂದು ಮೆದುಳು ಯಾವದಕ್ಕೂ ಸಾಲುತ್ತಿರಲಿಲ್ಲ. ಇನ್ನೂ ಐದಾರು ಮೆದುಳುಗಳೇ ಬೇಕಾಗುತ್ತಿದ್ದವು. ಮರೆಯುವಿನಿಂದ ಸ್ವಲ್ಪ ಕಷ್ಟ ಅನುಭವಿಸಬೇಕಾಗಿದೆ. ಹೀಗೆ ಕಲಿತ ವಿದ್ಯೆಗಳನ್ನು ಮರೆತು ಬಿಡುತ್ತೇವೆ. ಮತ್ತು ಮರೆಯುವಿನಿಂದ ಅನೇಕ ಅನಾವುತಗಳು ಉಂಟಾಗುತ್ತವೆ ಓಲೆಯಮೇಲೆ ಕುದಿಯಲು ಹಾಲು ಇಟ್ಟು ಟಿವಿ ನೋಡುತ್ತಾ ಕುಳಿತು, ಮರೆತು ಹಾಲು ಉಕ್ಕಿ ವಾಸನೆ ಬಂದ ಮೇಲೆಯೇ ನೆನಪಾಗೋದು, ಊರುಗಳಿಗೆ ಹೋಗುವಾಗ ದಾರಿಯನ್ನೇಮರೆತು ಬೇರೆ ದಾರಿಗೆ ಹೋಗಿ ಸಮಯಹಾಳಾಗಿ ಕೆಲಸಗಳು ನಿಂತು ಹೋಗುತ್ತವೆ. ಆಪರೇಷನ್ ಮಾಡುವಾಗ ಡಾಕ್ಟರ್ ಗಳು ಕತ್ತರಿ ಹತ್ತಿ ಇತರೆ ವಸ್ತುಗಳನ್ನು ಹೊಟ್ಟೆಯಲ್ಲಿ ಬಿಟ್ಟು ಹೊಲಿಗೆ ಹಾಕುವದು ಮತ್ತೇ ನೋವು ಮತ್ತೇ ಬಂದಾಗ ಹೋಟ್ಟೆಯೊಳಗೆ ಇರುವದು ಗೊತ್ತಾಗಿ ಹೋರ ತೆಗೆಯಲು ಮತ್ತೇ ಆಪರೇಷನ್ನ ಮಾಡೋದು ಮಾಡುವದು. ಬೀಗದ ಕೈ ಮರೆತು ಬಂದಿದ್ದರೆ ಮನೆಯ ಹೊರಗೆ ನಿಲ್ಲುವದು. ಹೀಗೆ ಮರೆವು ಶಾಪವಾಗಿ ಪರಿಣಮಿಸುತ್ತದೆ. ಮರೆವು ಮನುಷ್ಯನಿಗೆ ನೆಮ್ಮದಿಗಿರುತ್ತದೆ. ನೆಮ್ಮದಿಯಾಗಿರಲೂ ಬಿಡುವದಿಲ್ಲ.

– **ನಂದಿ ಬಸರಾಜ** ನಿವೃತ್ತ ಶಿಕ್ಷಕರು ಕೂಡ್ಲಿಗಿ

# ಸೌಲಭ್ಯ ಕೇಳಿದ್ರೆ ಬೆಂಗಳೂರಿನತ್ತ ತೋರಿಸ್ತಾರೆ

**3ನೇ ಪುಟದಿಂದ**

ಶೈಕ್ಷಣಿಕ, ಪಿಂಚಣಿ ಸರಿಯಾದ ಸಮಯಕ್ಕೆ ಕಾರ್ಮಿಕರಿಗೆ ಕೊಡಿಸುವಂತ ಪ್ರಯತ್ನ ಮಾಡುತ್ತಿಲ್ಲ ಏನಾದರೂ ವಿಚಾರಿಸಿದರೆ ಬೆಂಗಳೂರು ತೋರಿಸುತ್ತಾರೆ. ಕಾರ್ಮಿಕರು ಸೌಲಭ್ಯಗಳ ಬಗ್ಗೆ ಇರುವ ಭರವಸೆ ಕಳೆದುಕೊಳ್ಳುತ್ತಿದ್ದಾರೆ. ಕಾರ್ಮಿಕ ಇಲಾಖೆಯಲ್ಲಿ ಬ್ರೋಕರ್ ಗಳ ಹಾವಳಿ ಹೆಚ್ಚಾಗಿದ್ದು ನಕಲಿ ಕಾರ್ಡ್, ಗುರುತಿನ ಚೀಟಿ, ನೋಂದಣಿ ಕಣ್ಣಾಮುಚ್ಚಾಲೆಯಂತೆ ಆಟವಾಡುತ್ತಿದ್ದಾರೆ. ನಿವೇಶನ ಹಾಗೂ ಮನೆ ಇತರೆ ಬೇಡಿಕೆಗಳಿಗೆ ಆಗ್ರಹಿಸಿ ಕಾರ್ಮಿಕ ಸಚಿವ ಸಂತೋಷ್ ಲಾಡ್, ಮುಖ್ಯ ಮಂತ್ರಿಗಳಿಗೆ, ಶಾಸಕರಿಗೆ ಮನವಿ ಕೊಟ್ಟರು ಪ್ರಯೋಜನವಾಗುತ್ತಿಲ್ಲ. ಸಂಘಟನೆಯ ಕಲ್ಯಾಣ ಮಂಡಳಿಯಲ್ಲಿ ನಡೆದಿರುವ ಅಕ್ರಮ ಕಿಟ್ ಗಳ ಖರೀದಿ, ಮೆಡಿಕಲ್ ತಪಾಸಣೆ ಹೆಸರಿನಲ್ಲಿ ಲೂಟಿ ಮಾಡಿದ ಭ್ರಷ್ಟಾಚಾರ ಬಗ್ಗೆ ಉನ್ನತ ಮಟ್ಟದ ತನಿಖೆ ನಡೆಸುವಂತೆ ಸರ್ಕಾರಕ್ಕೆ ಒತ್ತಡ ತರಲಾಗಿದೆ ಎಂದರು ಕಲ್ಯಾಣ ಮಂಡಳಿಯ ಸಾವಿರಾರು ಕೋಟಿಯ ಹಣ ದುರ್ಬಳಕೆ ಆಗದಂತೆ ತಡೆಯಲು ಮುಂದಿನ ನೂತನ ಸಮಿತಿ ಮುಂದಾಗಬೇಕು ಎಂದರು

21 ಜನರ ಹೊಸ ನೂತನ ಸಮಿತಿ ಆಯ್ಕೆ ಮಾಡಲಾಗಿದೆ ಅಧ್ಯಕ್ಷರಾಗಿ ಎಂ.ಗೋಪಾಲ, ಕಾರ್ಯದರ್ಶಿಯಾಗಿ ಹೇಮಂತ್ ನಾಯ್ಕ್, ಖಜಾಂಚಿ ತಿಪ್ಪೇಸ್ವಾಮಿ, ಉಪಾಧ್ಯಕ್ಷರಾಗಿ, ಗಜಾನನ, ಗಾಳೆಪ್ಪ, ಬೀಯಮ್ಮ, ಅಂಜಿನಿ, ಸಹಕಾರ್ಯದರ್ಶಿಯಾಗಿ ನನ್ನು ಸಾಬ್, ಅನ್ಸಾರ್, ಆನಂದ, ಬಸಪ್ಪ, ಲಕ್ಷ್ಮಿ. ಆಯ್ಕೆಯಾಗಿದ್ದಾರೆ ಎಂದು ತಿಳಿಸಿದರು.

# ಬಕ್ರೀದ್ ಹಬ್ಬವನ್ನು ಶಾಂತಿ ಸೌಹಾರ್ದತೆಯಿಂದ ಆಚರಿಸಿ

### ಜಿಲ್ಲಾಧಿಕಾರಿ ನಲಿನ್ ಅತುಲ್ ಹೇಳಿಕೆ । ಶಾಂತಿ ಪೂರ್ವಭಾವಿ ಸಭೆ



■ **ಹಂಪಿ ಟೈಮ್ಸ್ ಕೊಪ್ಪಳ**

ಕೊಪ್ಪಳ ಜಿಲ್ಲೆಯಲ್ಲಿ ಜೂನ್ 7 ರಂದು ನಡೆಯುವ ಬಕ್ರೀದ್ ಹಬ್ಬವನ್ನು ಶಾಂತಿ ಹಾಗೂ ಸೌಹಾರ್ದತೆಯಿಂದ ಆಚರಣೆ ಮಾಡಬೇಕೆಂದು ಜಿಲ್ಲಾಧಿಕಾರಿ ನಲಿನ್ ಅತುಲ್ ಹೇಳಿದರು.

ಅವರು ಗುರುವಾರ ಕೊಪ್ಪಳ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲನಲ್ಲಿ ಜಿಲ್ಲೆಯ ಮುಸ್ಲೀಂ ಸಮಾಜದ ಮುಖಂಡರು ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ಕರೆದ ಬಕ್ರೀದ್ ಹಬ್ಬದ ಶಾಂತಿ ಪಾಲನಾ ಪೂರ್ವಭಾವಿ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು. ಹಬ್ಬವನ್ನು ಸಂಭ್ರಮದಿಂದ ಆಚರಣೆ ಮಾಡುವ ಸಂದರ್ಭದಲ್ಲಿ ಕೋಮು ಸೌಹಾರ್ದತೆಗೆ ಧಕ್ಕೆಯಾಗದಂತೆ ನೋಡಿಕೊಳ್ಳಬೇಕು ಎಂದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ರಾಮ್ ಎಲ್. ಅರಸಿದ್ಧಿ ಮಾತನಾಡಿ, ಜಿಲ್ಲೆಯಲ್ಲಿ ಯಾವುದೇ ಕೋಮು ಗಲಭೆಗೆ ಅವಕಾಶ ನೀಡದೆ ನಮ್ಮ ಪೊಲೀಸ್ ಇಲಾಖೆಗೆ ಸಹಕಾರ ನೀಡಬೇಕು. ಮುಸ್ಲಿಂ ಸಮಾಜದ ಮುಖಂಡರಿಗೆ ಈ ಸಭೆಗೆ ಕರೆದ ಉದ್ದೇಶ ತಮ್ಮ ಇತರರಿಗೂ ಈ ಮಾಹಿತಿ ತಿಳಿಸಬೇಕು. ಪ್ರಾಣಿಬಲಿ, ಅವುಗಳ ಸಾಗಾಟದ ಮೇಲೆ ನಿಗಾವಹಿಸಲು ಜಿಲ್ಲೆಯಲ್ಲಿ 16 ಚೆಕಪೋಸ್ಟ ತೆರೆಯಲಾಗುವುದು. ಸೋಶಿಯಲ್ ಮೀಡಿಯಾದಲ್ಲಿ ಬರುವ ಯಾವುದೇ ಸುಳ್ಳು ಸುದ್ದಿಯನ್ನು ನಂಬದೆ ಅಂತವುಗಳನ್ನು ನಮ್ಮ ಗಮನಕ್ಕೆ ತರಬೇಕು. ಈಗಾಗಲೇ ರೌಡಿ ಶೀಟರಗಳ ಪರೇಡ್ ಮಾಡಲಾಗಿದೆ. ಜೂನ್ 7ನೇ ತಾರಿಖು ಹಬ್ಬದ ಮುನ್ನಾ ದಿನ ಜೂನ್ 6ನೇ ತಾರಿಖಿನ ರಾತ್ರಿಯಿಂದಲೇ ನಮ್ಮ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳು ಕಾನೂನು ಸುವ್ಯವಸ್ಥೆಗೆ ಧಕ್ಕೆ ಭಾರದ ರೀತಿಯಲ್ಲಿ ನೋಡಿಕೊಳ್ಳಲು ಗಸ್ತಿನಲ್ಲಿ ಇರುತ್ತಾರೆ. ಈಗಾಗಲೇ ಜಿಲ್ಲೆಯ ಪೊಲೀಸ್ ಠಾಣಾ ಹಂತಗಳಲ್ಲಿ ನಮ್ಮ ಅಧಿಕಾರಿಗಳು ಸಭೆಗಳನ್ನು ಮಾಡಿದ್ದಾರೆ. ಸರ್ಕಾರದ ಮಾರ್ಗಸೂಚಿಗಳ ಪ್ರಕಾರ ಬಕ್ರೀದ್ ಹಬ್ಬವನ್ನು ಆಚರಣೆ ಮಾಡಬೇಕೆಂದು ಹೇಳಿದರು.

ಮುಸ್ಲಿಂ ಸಮಾಜದ ಮುಖಂಡರು ಮಾತನಾಡಿ, ಬೆಳಿಗ್ಗೆ 9 ರಿಂದ 10 ಗಂಟೆಗೆ ನಮಾಜ್ ಮಾಡುವ ಮುಖಾಂತರ ಶಾಂತಿಯುತವಾಗಿ ಹಬ್ಬವನ್ನು ಆಚರಿಸುತ್ತೇವೆ ಎಂದರು.

ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ, ಅಪರ ಎಸ್ಪಿ ಆರ್.ಹೆಮಂತ್ ಕುಮಾರ, ಉಪವಿಭಾಗಾಧಿಕಾರಿ ಕ್ಯಾಪ್ಟನ್ ಮಹೇಶ ಮಾಲಗಿತ್ತಿ ಇತರರು ಇದ್ದರು.